# ಕಾರ್ಯಶಿಕ್ಷಣ

## ಮೂರನೆಯ ಇಯತ್ತೆ





कार्यशिक्षण इयत्ता तिसरी (कन्नड माध्यम)

Tele MANAS
National Tele Mental Health Programme
14416

# ಟೆಲಿ ಮಾನಸ ಸಹಾಯವಾಣಿ

**Tele MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24 x 7 ಉಚಿತ, ಏಕಾತ್ಮಿಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

# ಮನೋದರ್ಪಣ

**ಮನೋದರ್ಪಣ (8448440632)** ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸಗಳಲ್ಲಿ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಶಾಸನ ನಿರ್ಣಯ ಕ್ರಮಾಂಕ: ಅಭ್ಯಾಸ – 2116/(ಪ್ರ.ಕ್ರ. 43/16) ಎಸಡಿ–4 ದಿನಾಂಕ 25.04.2016
ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿ. 13.04.2026 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು
ಸನ 2026–27 ಈ ಶೈಕ್ಷಣಿಕ ವರ್ಷದಿಂದ ನಿರ್ಧಾರಿತಗೊಳಿಸಲು ಮಾನ್ಯತೆಯನ್ನು ಕೊಡಲಾಗಿದೆ.

# ಕಾರ್ಯಶಿಕ್ಷಣ

## ಮೂರನೆಯ ಇಯತ್ತೆ



**ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 4**

ಜೊತೆಯಲ್ಲಿರುವ ಪೆಟ್ಟಿಗೆಯಲ್ಲಿನ Q.R. Code ನಿಮ್ಮ ಸ್ಮಾರ್ಟ್‌ಫೋನ್‌ನೊಂದಿಗೆ ಸ್ಕ್ಯಾನ್ ಮಾಡಲಾಗಿ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕದ ಘಟಕಗಳಿಗೆ ಸಂಬಂಧಿಸಿದ ದೃಶ್ಯ, ಶ್ರಾವ್ಯ ಮತ್ತು ದೃಶ್ಯಶ್ರಾವ್ಯ ಸ್ವರೂಪಗಳಲ್ಲಿ ಅಧ್ಯಯನ – ಅಧ್ಯಾಪನ ಸಾಮಗ್ರಿಗಳು ಉಪಲಬ್ಧ ಆಗುತ್ತವೆ.

© ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳಿ, ಪುಣೆ 411004.

ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳಿಯ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ನಿರ್ದೇಶಕರು, ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳಿ ಇವರ ಲಿಖಿತ ಅನುಮತಿಯಿಲ್ಲದೆ ಬಳಸುವಂತಿಲ್ಲ.

**ಪ್ರಥಮಾವೃತ್ತಿ**
**2026**

**✻ ಕಾರ್ಯಶಿಕ್ಷಣ ಸಮಿತಿ ✻**

ಶ್ರೀಮತಿ ಪಲ್ಲವಿ ಆಪಟೆ (ಅಧ್ಯಕ್ಷ)
ಶ್ರೀಮತಿ ಲೀನಾ ತಲಾಠಿ (ಸದಸ್ಯ)
ಶ್ರೀಮತಿ ತೇಜಶ್ವಿನಿ ಮಸ್ಕೆ (ಸದಸ್ಯ)
ಶ್ರೀಮತಿ ವಂದನಾ ಫಡತರೆ (ಸದಸ್ಯ)
ಶ್ರೀ ಸುನೀಲ ಮೋರೆ (ಸದಸ್ಯ)
ಡಾ. ರೂಪೇಶ ತಾಂಬೆ (ಸದಸ್ಯ)
ಶ್ರೀಮತಿ ಗೀತಾಂಜಲಿ ಕಾಶೀದ (ಸದಸ್ಯ)
ಶ್ರೀ ಅಂಕಿತ ದೇಶಮುಖ (ನಿಮಂತ್ರಿತ ಸದಸ್ಯ)
ಶ್ರೀಮತಿ ರಶ್ಮಿ ರಾಜಪುರಕರ (ನಿಮಂತ್ರಿತ ಸದಸ್ಯ)
ಶ್ರೀ ಪ್ರಕಾಶ ಪಾರಖೆ (ನಿಮಂತ್ರಿತ ಸದಸ್ಯ)
ಶ್ರೀ ವಿದ್ಯಾಧರ ಮಾತ್ರೆ (ನಿಮಂತ್ರಿತ ಸದಸ್ಯ)
ಶ್ರೀಮತಿ ದೀಪಾಲಿ ಜೋಗದಂಡ (ಅಭ್ಯಾಸಕ್ರಮ ಸಮನ್ವಯಕ)
ಡಾ. ಅಜಯಕುಮಾರ ಲೋಳಗೆ (ಸದಸ್ಯ ಸಚಿವ)

**✻ ಸಂಯೋಜಕ ✻**

**ಡಾ. ಅಜಯ ಕುಮಾರ ಲೋಳಗೆ**
ವಿಶೇಷಾಧಿಕಾರಿ, ಕಾರ್ಯಾನುಭವ
ಪ್ರ. ವಿಶೇಷಾಧಿಕಾರಿ, ಕಲೆ ಪಾಠ್ಯಪುಸ್ತಕ ಮಂಡಳ,
ಪುಣೆ-4

**✻ ಗುಣವತ್ತಾ ಸಮಿಕ್ಷಕ ✻**

ಡಾ. ಎಮ್.ಜಿ. ಗುರುವ (ಗುಣವತ್ತಾ ಪರೀಕ್ಷಕ)
ಆಡ್ವ. ಸಂದೇಶ ಸಾಖರೆ (ವಿಧಿ ತಜ್ಞ)
ಡಾ. ಅತುಲ ಜಾಧವ (CWSN ತಜ್ಞ)

**✻ ಕನ್ನಡ ಭಾಷಾಂತರ ಸಂಯೋಜಕ ✻**

ಶ್ರೀಮತಿ ಕೇತಕಿ ಜಾನಿ
ಪ್ರ. ವಿಶೇಷ ಅಧಿಕಾರಿ ಹಾಗೂ ಪ್ರಭಾರಿ
**ವಿದ್ಯಾಸಚಿವ (ಭಾಷ) ಪಠ್ಯಪುಸ್ತಕ ಮಂಡಳಿ, ಪುಣೆ**

**ಭಾಷಾಂತರಕಾರ :**
ಶ್ರೀಮತಿ ಸುಮಿತ್ರಾ ಇಚಗೆ
**ಸಮೀಕ್ಷಕರು :**
ಶ್ರೀಮತಿ ಸವಿತಾ ಬಳ್ಳೋಳಿ
**ಗುಣಮಟ್ಟ ಪರಿಕ್ಷಕರು :**
ಶ್ರೀಮತಿ ರತ್ನಾ ಸಿ. ಪಟ್ಟಣ

**✻ ಮುಖಪೃಷ್ಠ ಚಿತ್ರ ಹಾಗೂ ಅಲಂಕಾರ ✻**

ಶ್ರೀ ಲಕ್ಷ್ಮಿಕಾಂತ ಕಾಳೆ
ಕುಮಾರಿ ಪ್ರಾಜಕ್ತಾ ಕೇರಕರ

**ಅಕ್ಷರ ಜೋಡಣೆ:** ಕ್ವಿಂಟೆಕ್ಸ್, ಮುಂಬಯಿ
**ನಿರ್ಮಿತಿ:**
**ಕಾಗದ:** 70 ಜಿ.ಎಸ.ಎಮ. ಕ್ರಿಮವೊವ್ಹ
**ಮುದ್ರಣಾದೇಶ :**
**ಮುದ್ರಕ :**

**✻ ನಿರ್ಮಿತಿ ✻**

ಶ್ರೀಮತಿ ಮಿತಾಲಿ ಶೀತಪ
**ಪ್ರ. ಮುಖ್ಯ ನಿರ್ಮಿತಿ ಅಧಿಕಾರಿ**
ಶ್ರೀ ಪ್ರಶಾಂತ ಹರಣೆ
**ನಿರ್ಮಿತಿ ಅಧಿಕಾರಿ**

**✻ ಪ್ರಕಾಶಕ ✻**

ಹೇಮಂತ ಬಾಬರ
**ಪ್ರ. ನಿಯಂತ್ರಕ**
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

**ಭಾಗ 4 ಕ**

# ನಾಗರಿಕ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲನಾಗಿರಬೇಕು.

(ಘ) ನಮ್ಮ ದೇಶದ ರಕ್ಷಣ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂಥ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಬೇಕು.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ಕೃಷ್ಟತೆ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳನ್ನು ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದ ತನ್ನ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

## राज्यगीत

**जय जय महाराष्ट्र माझा, गर्जा महाराष्ट्र माझा**
**जय जय महाराष्ट्र माझा, गर्जा महाराष्ट्र माझा ।।धृ।।**

**भिती न आम्हा तुझी मुळी ही गडगडणाऱ्या नभा**
**अस्मानाच्या सुलतानीला जबाब देती जिभा**
**सह्याद्रीचा सिंह गर्जतो शिव शंभू राजा**
**दरी दरीतून नाद गुंजला महाराष्ट्र माझा**
**जय जय महाराष्ट्र माझा, गर्जा महाराष्ट्र माझा ।।१।।**

**काळ्या छातीवरी कोरली, अभिमानाची लेणी**
**पोलादी मनगटे खेळती, खेळ जीवघेणी**
**दारिद्र्याच्या उन्हात शिजला**
**निढळाच्या घामाने भिजला**
**देश गौरवासाठी झिजला**
**दिल्लीचे ही तख्त राखितो, महाराष्ट्र माझा**
**जय जय महाराष्ट्र माझा, गर्जा महाराष्ट्र माझा**
**जय जय महाराष्ट्र माझा ।।२।।**

# ಪ್ರಸ್ತಾವನೆ

ವಿದ್ಯಾರ್ಥಿ ಮಿತ್ರರೆ,

ರಾಷ್ಟ್ರೀಯ ಶೈಕ್ಷಣಿಕ ಧೋರಣೆ 2020ರ ಅನುಸಾರ ನಿಮ್ಮ ವಯಸ್ಸಿಗೆ ಮತ್ತು ಅನುಭವಗಳನ್ನು ಗಮನದಲ್ಲಿ ತೆಗೆದುಕೊಂಡು ನಿಮಗೆ ಈ ಪಠ್ಯಪುಸ್ತಕ ಅಭ್ಯಾಸಿಸುವಾಗ ಆನಂದವಾಗುವುದು ಮತ್ತು ಹೊಸ ಹೊಸದಾಗಿರುವ ಪ್ರಾತ್ಯೇಕ್ಷಿಕ ಕೃತಿ ಮಾಡಿ ನೋಡಲು ದೊರೆಯುತ್ತದೆ.

ಈ ಪಠ್ಯಪುಸ್ತಕದಲ್ಲಿ ದೈನಂದಿನ ಜೀವನದಲ್ಲಿಯ ಕೆಲಸದ ಬಗ್ಗೆ ಮಾಹಿತಿ ದೊರೆಯುವುದು. ಮನೆಯಲ್ಲಿಯ ವ್ಯಕ್ತಿ ಹಾಗೆಯೇ, ಪರಿಸರದಲ್ಲಿಯ ವ್ಯಕ್ತಿ, ಬೇರೆ ಬೇರೆ ವ್ಯವಸಾಯ ಮತ್ತು ಕುಶಲಕರ್ಮಿ (ಕೆಲಸಗಾರ) ಯಾವ ಕೆಲಸ ಮಡುವರು ಎಂಬುದನ್ನು ನೀವು ತಿಳಿದುಕೊಳ್ಳುವಿರಿ. ಒಳ್ಳೆಯ ವರ್ತನ, ಒಬ್ಬರಿಗೊಬ್ಬರು ಒಳ್ಳೆಯ ರೀತಿಯಲ್ಲಿ ಮಾತನಾಡುವುದು ಮತ್ತು ಸಮಾಜದಲ್ಲಿ ಹೇಗೆ ಇರಬೇಕೆಂಬುದು ಕೂಡಾ ಕಲಿಯಲು ದೊರೆಯುವುದು.

ಪುಸ್ತಕದಲ್ಲಿ ಅನೇಕ ಕೃತಿ ಕೊಟ್ಟಿದ್ದಾರೆ. ಯಾವ ರೀತಿಯೆಂದರೆ ಕಾಗದದಿಂದ ವಸ್ತು ತಯಾರಿಸುವುದು, ಎಲೆ-ಹೂವುಗಳಿಂದ ರಂಗೋಲಿ ತೆಗೆಯುವುದು, ಸರ-ತೋರಣ ತಯಾರಿಸುವುದು, ಬೀಜಗಳಿಂದ ಕಲಾಕೃತಿ, ಮಣ್ಣಿನಿಂದ ಆಟಗೆ ಸಾಮಾನೂ ತಯಾರಿಸುವುದು, ಹಿತ್ತಲು ತೋಟ ಮತ್ತು ಕ್ಷೇತ್ರ ಭೇಟಿ ಮಾಡುವುದು. ಈ ಕೃತಿ ಮೂಲಕ ನಮ್ಮ ಕಲ್ಪನಾಶಕ್ತಿ, ಹಸ್ತಕೌಶಲ್ಯ ಮತ್ತು ವಿಚಾರಮಾಡುವ ಕ್ಷಮತೆ ಹೆಚ್ಚಾಗುವುದು.

ಕೃತಿ, ಚಿತ್ರಗಳು, ಸಂವಾದ, ಕಥೆ, ಹಾಡು ಮತ್ತು ಆಟ ಇವುಗಳ ಮೂಲಕ ಕಲಿಯುವುದು. ಇನ್ನೂ ಸುಲಭ ಹಾಗೂ ಆನಂದಾಯಿ ಆಗುವುದು. ನಿಮಗೆ ಸ್ವತ: ಪ್ರತಿಯೊಂದು ಕೃತಿ ಮಾಡಿ ಕಲಿಯುವ ಅವಕಾಶ ಈ ಪಠ್ಯಪುಸ್ತಕದಲ್ಲಿ ದೊರೆಯುವುದು.ಶಿಕ್ಷಕರು ನಿಮ್ಮ ಕೆಲಸದ ಕಡೆಗೆ ಗಮನಿಸುವರು ಮತ್ತು ನೀವು ಏನು ಕಲಿತಿದ್ದೀರಿ ಎಂಬುದನ್ನು ನೋಡುವರು ಹಾಗೂ ಅದರ ನೊಂದಣಿ ತೆಗೆದುಕೊಳ್ಳುವರು.

ಪ್ರತಿಯೊಬ್ಬರು ತಮ್ಮ ಪದ್ಧತಿಯಿಂದ ಕಲಿಯಬೇಕು, ಪ್ರಯತ್ನ ಮಾಡಬೇಕು ಮತ್ತು ಪ್ರತಿಯೊಂದು ಕೃತಿಯಲ್ಲಿ ಸಹಭಾಗ ತೆಗೆದುಕೊಳ್ಳಬೇಕು, ಎಂಬುದು ಅಪೇಕ್ಷೆ ಇದೆ.

ನಿಮ್ಮ ಉಜ್ವಲ ಭವಿಷ್ಯದ ಸಲುವಾಗಿ ಮನ:ಪೂರ್ವಕ ಶುಭಾಶಯಗಳು!

ನಡೆಯಿರಿ ಮತ್ತೆ ಕಲಿಯೋಣ, ಮಾಡೋಣ ಹಾಗೂ ಆನಂದ ಪಡೆಯೋಣ!

**(ಅನುರಾಧಾ ಓಕ್)**
**ಸಂಚಾಲಕರು**

ಮಹಾರಾಷ್ಟ್ರ ರಾಜ್ಯ ಪಠ್ಯಮಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನೆ ಮಂಡಳಿ, ಪುಣೆ 4.

ಪುಣೆ

ದಿನಾಂಕ: 15 ಎಪ್ರಿಲ 2026

ಭಾರತೀಯ ಸೌರ ದಿನಾಂಕ: ವೈಶಾಖ ಶು. 2, ಶಕೆ 1948, ಅಕ್ಷಯತೃತಿಯ

# ಶಿಕ್ಷಕರಿಗಾಗಿ

ರಾಷ್ಟ್ರೀಯ ಶೈಕ್ಷಣಿಕ ಧೋರಣೆ 2020ರನುಸಾರ ನಿಶ್ಚಿತ ಮಾಡಲಾದ 5+3+3+4 ಈ ಶೈಕ್ಷಣಿಕ ಆಕೃತಿಬಂಧದ ಅನುಸಾರ ಪೂರ್ವ ತಯಾರಿ ಸ್ತರದ ವಿಚಾರ ಮಾಡಿ ಮೂರನೆಯ ಇಯತ್ತೆಯ ಸಲುವಾಗಿ ಕಾರ್ಯಶಿಕ್ಷಣ ಈ ವಿಷಯದ ಪಾಠ್ಯಪುಸ್ತಕ ಮೊದಲನೆಯದಾಗಿ ವಿಕಸಿತ ಮಾಡಲಾಗಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಚಾಲನೆ ಕೊಡುವಾಗ ಅವರ ಅನುಭವ ವಿಶ್ವಕ್ಕೆ ಸಂಬಂಧಿಸಿದ, ಕೃತಿ ಪ್ರಧಾನ ಮತ್ತು ಆನಂದಾಯಿ ಶಿಕ್ಷಣ ಕೊಡುವುದು. ಈ ಪಠ್ಯಪುಸ್ತಕದ ಮುಖ್ಯ ಉದ್ದೇಶವಾಗಿದೆ. ಈ ಪಠ್ಯಪುಸ್ತಕದ ರಚನೆ ಮಾಡುವಾಗ ಕೃತಿ ಹಾಗೂ ಅನುಭವ ಆಧಾರಿತ ಪದ್ಧತಿಯನ್ನು (ಸಮಾವೇಶ) ಒಳಗೂಡಿಸಲಾಗಿದೆ. ಅಭ್ಯಾಸಕ್ರಮದಲ್ಲಿಯ ಧ್ಯೇಯಗಳು, ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ ಇವುಗಳ ವಿಚಾರ ಮಾಡಿ ಉಪಕ್ರಮ ಹಾಗೂ ಕೃತಿಗಳ ಆಶಯ ಆಯ್ಕೆ ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ದೈನಂದಿನ ಜೀವನದಲ್ಲಿಯ ಕೆಲಸಗಳ ಪರಿಚಯ, ಮನೆಯಲ್ಲಿಯ ಹಾಗೂ ಪರಿಸರದಲ್ಲಿಯ ವ್ಯಕ್ತಿಗಳ ಭೂಮಿಕೆ (ಪಾತ್ರ), ಸಾಮಾಜಿಕ ಜೀವನದಲ್ಲಿ ಸಕಾರಾತ್ಮಕ ವರ್ತನ, ಹಾಗೆಯೇ ವಿವಿಧ ವ್ಯವಸಾಯ ಹಾಗೂ ಕಸಬುದಾರರ ಕಾರ್ಯಗಳ ಮಾಹಿತಿ ಅನುಭವದಿಂದ ದೊರೆಯಬೇಕು, ಎಂಬುದರ ಸಲುವಾಗಿ ವಿವಿಧ ಉಪಕ್ರಮಗಳ ಸಮಾವೇಶ ಮಾಡಲಾಗಿದೆ.

ವಿದ್ಯಾರ್ಥಿಗಳಲ್ಲಿ ಸಂವಾದ ಕೌಶಲ್ಯ, ಹಸ್ತಕೌಶಲ್ಯ, ತಾಂತ್ರಿಕ ಕೌಶಲ್ಯ ಮತ್ತು ಸೃಜನಶಿಲತೆ ವಿಕಸಿತ ಮಾಡುವ ದೃಷ್ಟಿಯಿಂದ ಕಾಗದಕೆಲಸ, ಹೂವು ಎಲೆಗಳ ರಂಗೋಲಿ, ಸರ-ತೋರಣ, ಬೀಜಗಳಿಂದ ಕಲಾಕೃತಿ, ಮಣ್ಣಿನಿಂದ ಆಟಿಗೆ ಸಾಮಾನೂ ತಯಾರಿಸುವುದು, ಹಿತ್ತಲು ತೋಟ, ಕ್ಷೇತ್ರಭೇಟಿ (ಪರಿಸರ ಭೇಟಿ), ಪದಬಂಧ ಹೀಗೆ ವಿವಿಧ ಕೃತಿ ಉಪಕ್ರಮಗಳ ಸಮಾವೇಶ ಮಾಡಲಾಗಿದೆ. ಈ ಎಲ್ಲ ಕೃತಿ ಉಪಕ್ರಮ ಅನುಭವಧಾರಿತ ಉದಾಹರಣೆಗಳೊಂದಿಗೆ ಸ್ಪಷ್ಟ ಮಾಡಲಾಗಿದ್ದು, ವಿದ್ಯಾರ್ಥಿಗಳ ಜೀವನಕ್ಕೆ ಅವುಗಳನ್ನು ಜೋಡಿಸಲಾಗಿದೆ. ಆಕರ್ಷಕ ಚಿತ್ರಗಳು, ಪ್ರಾತ್ಯಕ್ಷಿಕ ಕೃತಿ ಬಣ್ಣಗಳ ಸಂಯೋಜನೆ ಮತ್ತು ಪ್ರತ್ಯಕ್ಷ ಕೃತಿಯಿಂದ ಈ ಪಠ್ಯಪುಸ್ತಕ ಹೆಚ್ಚು ಪ್ರಭಾವಿ ಹಾಗೂ ಸ್ನೇಹಪೂರ್ಣ ತಯಾರಾಗಿದೆ.

ಪ್ರತಿಯೊಂದು ಘಟಕ ಕೃತಿಶಿಲತೆಗೆ ಹಾಗೂ ವಿಚಾರ ಕ್ಷಮತೆಗೆ ಪ್ರಾಧಾನ್ಯ ಕೊಡುವ ಕ್ಷಮತೆ ಹಾಗೂ ಅಧ್ಯಯನ ನಿಷ್ಪತ್ತಿಯೊಂದಿಗೆ ಜೋಡಿಸಲಾಗಿದೆ. ಸಂವಾದ, ಕಥೆ, ಹಾಡು ಇವುಗಳ ಉಪಯೋಗ ಮಾಡಿ ಅಧ್ಯಯನ-ಅಧ್ಯಾಪನ ಪ್ರಕ್ರಿಯೆ ಆನಂದಮಯ ಮಾಡುವ ಪ್ರಯತ್ನ ಮಾಡಲಾಗಿದೆ. ಈ ಪಠ್ಯಪುಸ್ತಕದ ವೈಶಿಷ್ಟ್ಯ ಮಹತ್ವ ಕೊಡಲಾಗಿದ್ದು, ಈ ಕೃತಿ ವರ್ಗದಲ್ಲಿ ಮತ್ತು ವರ್ಗದ ಹೊರಗೆ ಮಾಡಲು ಬರುವುದರ ಸಲುವಾಗಿ ಪ್ರತಿಯೊಂದು ಘಟಕದ ಕೆಳಗೆ ಗುಲಾಬಿ ಬಣ್ಣದ ಚೌಕಟ್ಟಿನಲ್ಲಿ ಶಿಕ್ಷಕರ ಸಲುವಾಗಿ ಸೂಚನೆ ಕೊಡಲಾಗಿದೆ.

ಅಭ್ಯಾಸಕ್ರಮ ಧ್ಯೇಯ (ಅ.ಧ್ಯೇ), ಕ್ಷಮತೆ (ಕ್ಷ), ಅಧ್ಯಯನ ನಿಷ್ಪತ್ತಿ (ಅ.ನಿ.), ಅಧ್ಯಯನ ಅನುಭವ ಹಾಗೂ ಮೂಲ್ಯಾಂಕನ ಪದ್ಧತಿ ಇವುಗಳ ವಿಚಾರ ಮಾಡಿ ಸರಕಾರವು ನಿಶ್ಚಿತ ಪಡಿಸಿದ ತಾಸಿಕೆಗಳಿಗನುಸರಿಸಿ ಉಪಕ್ರಮಗಳ ಮಂಡಣೆ ಮಾಡಲಾಗಿದೆ. ಅಧ್ಯಯನ ನಿಷ್ಪತ್ತಿಯ ಪರಿಣಾಮಕಾರಕತೆ ತಪಾಸಣೆಯ ಸಲುವಾಗಿ ವಿವಿಧ ನಿಕಷಗಳ ಉಪಯೋಗ ಮಾಡಿ ಸಾತತ್ಯಪೂರ್ಣ ಸರ್ವಂಕಷ ಮೂಲ್ಯಮಾಪನ ಮಾಡಬೇಕು. ವಿಶೇಷ ಅವಶ್ಯಕತೆ ಇರುವ ವಿದ್ಯಾರ್ಥಿಗಳ ಮೂಲ್ಯಾಂಕನ ಮಾಡುವಾಗ ಸಂವೇದನಶಿಲತೆಗೆ ಅನುಸರಿಸಿ, ಅವರಿಗೆ ಅಭಿವ್ಯಕ್ತ ಹಾಗೂ ಕೃತಿಯಿಂದ ಸಹಭಾಗಿ ಆಗುವ ಅವಕಾಶ ಕೊಡುವುದು ಅವಶ್ಯಕವಿದೆ.

ವಿದ್ಯಾರ್ಥಿಗಳ ಕ್ಷಮತೆ ವಿಕಸಿತ ಮಾಡುವ ಸಲುವಾಗಿ ಅನೇಕ ಶಿಕ್ಷಕರು ನಾವಿನ್ಯಪೂರ್ಣ ಉಪಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ. ಇಂತಹ ಉಪಕ್ರಮಗಳ ಮಾಹಿತಿ ಹಾಗೂ ಛಾಯಾಚಿತ್ರಗಳನ್ನು ಪಠ್ಯಪುಸ್ತಕ ಮಂಡಳದ ಕಡೆಗೆ ಕಳುಹಿಸಬೇಕು. ಈ ಪಠ್ಯಪುಸ್ತಕವನ್ನು ಪ್ರತ್ಯೇಕ್ಷವಾಗಿ ಉಪಯೋಗ ಮಾಡಿದಾಗ ಸಂಬಂಧಿತರು ತಮ್ಮ ಸೂಚನೆ ಹಾಗೂ ಅಭಿಪ್ರಾಯ ಮಂಡಳದ ಕಡೆಗೆ ತಲುಪಿಸಬೇಕೆಂಬುದು ಒಂದು ಅಪೇಕ್ಷೆ ಇದೆ. ತಮ್ಮ ಕಲ್ಪನೆ ಹಾಗೂ ಉಪಕ್ರಮಗಳ ಮನಪೂರ್ವಕ ಸ್ವಾಗತವಿದೆ.

12 ನೆಯ ಶತಮಾನದಲ್ಲಿಯ ವಿದ್ಯಾರ್ಥಿ ಸಕ್ಷಮ, ಸೃಜನಶೀಲ ಮತ್ತು ಜವಾಬ್ದಾರಿಯುತ ನಾಗರಿಕನಾಗಬೇಕು. ಎಂಬುದರ ಸಲುವಾಗಿ ಈ ಪಠ್ಯಪುಸ್ತಕದಿಂದ ಒಂದು ಸಕಾರಾತ್ಮಕ ಹೆಜ್ಜೆ ಇಡಲಾಗಿದೆ. ಈ ಪ್ರಯತ್ನಕ್ಕೆ ಎಲ್ಲರ ಸಹಕಾರ್ಯ ಲಭಿಸಬೇಕು ಎಂಬುದೆ ಅಪೇಕ್ಷೆ ಇದೆ.

**ಕಾರ್ಯಶಿಕ್ಷಣ (ವಿಷಯ ಸಮಿತಿ)**

ಪಠ್ಯಪುಸ್ತಕ ಮಂಡಳ, ಪುಣೆ.

# ಅಭ್ಯಾಸಕ್ರಮ, ಅಧ್ಯಯನ, ಕ್ಷಮತೆ, ಘಟಕ

| | |
|---|---|
| **ಅಭ್ಯಾಸಕ್ರಮ ಧ್ಯೇಯ :** CG-1 : ದೈನಂದಿನ ಕೆಲಸದ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು. | |
| **ಅಭ್ಯಾಸಕ್ರಮ ಕ್ಷಮತೆ :** C-1.1 : ಮನೆಯಲ್ಲಿಯ ವ್ಯಕ್ತಿಗಳ ದೈನಂದಿನ ಕೆಲಸದ ಬಗ್ಗೆ ಮಾಹಿತಿ ಹೇಳುವುದು. | **ಘಟಕ:** ದೈನಂದಿನ ಕೆಲಸಗಳು |
| **ಉಪಘಟಕ** | **ಅಧ್ಯಯನ ನಿಷ್ಪತ್ತಿ** (LOs) |
| 1) ಕುಟುಂಬದಲ್ಲಿಯ ದೈನಂದಿನ ಕೆಲಸಗಳು | 1) ಮನೆಯಲ್ಲಿಯ ವ್ಯಕ್ತಿಗಳ ದೈನಂದಿನ ಕೆಲಸಗಳ ನಿರೀಕ್ಷಣೆ ಮಾಡುತ್ತಾನೆ. |
| 2) ಮನೆಯಲ್ಲಿಯ ಸಾಧನಗಳು | 2) ಮನೆಯಲ್ಲಿಯ ಕೆಲಸಗಳನ್ನು ಮಾಡುವಾಗ ಉಪಯೋಗಿಸಲಾಗುವ ಸಾಧನ ಸಾಹಿತ್ಯಗಳ ಮಾಹಿತಿ ಪಡೆದುಕೊಳ್ಳುವನು. |
| 3) ಸಾಧನಗಳ ಉಪಯೋಗ | 3) ಮನೆಯಲ್ಲಿಯ ವಿವಿಧ ಸಾಧನಗಳ ಉಪಯೋಗ ಸ್ವಂತದ ಶಬ್ದದಲ್ಲಿ ಹೇಳುತ್ತಾನೆ. |
| 4) ಮನೆಗೆಲಸದಲ್ಲಿ ಸಹಾಯ | 4) ಸ್ವಂತದ ಹಾಗೂ ಕ್ಷಮತೆಯನುಸಾರ ಮನೆಗೆಲಸದಲ್ಲಿ ಸಹಾಯ ಮಾಡುತ್ತಾನೆ. |
| **ಅಭ್ಯಾಸಕ್ರಮ ಕ್ಷಮತೆ :** C-1.2. : ಪರಿಸರದಲ್ಲಿಯ ವ್ಯಕ್ತಿಗಳ ದೈನಂದಿನ ಕೆಲಸದ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಹಾಗೂ ಆ ವಿಷಯದ ಬಗ್ಗೆ ಹೇಳುವುದು. | |
| **ಘಟಕ :** ಪರಿಸರದಲ್ಲಿಯ ವ್ಯಕ್ತಿಗಳ ಕೆಲಸಗಳು. | |
| 1) ಪರಿಸರದಲ್ಲಿಯ ವ್ಯಕ್ತಿ ಹಾಗೂ ಅವರ ಕೆಲಸ | 5) ಪರಿಸರದಲ್ಲಿಯ ವ್ಯಕ್ತಿಗಳ ಕೆಲಸದ ನಿರೀಕ್ಷಣೆ ಮಾಡುವನು. |
| 2) ಕೆಲಸಗಳ ಉಪಯೋಗ | 6) ಪರಿಸರದಲ್ಲಿಯ ವ್ಯಕ್ತಿಗಳ ಕೆಲಸದ ಉಪಯೋಗ ಹೇಳುವನು. |
| | 7) ಪರಿಸರದಲ್ಲಿಯ ವ್ಯಕ್ತಿಗಳ ಕೆಲಸದ ಅನುಭವ ಹೇಳುತ್ತಾನೆ. |
| **ಅಭ್ಯಾಸಕ್ರಮ ಧ್ಯೇಯ :** CG-2 : ಸಾಮಾಜಿಕ ಜೀವನವನ್ನು ನಡೆಸುವಾಗ ಸಕಾರಾತ್ಮಕವಾಗಿ ವರ್ತಿಸುವುದು. | **ಘಟಕ :** ನಮ್ಮ ವರ್ತನೆ |
| **ಅಭ್ಯಾಸಕ್ರಮದ ಕ್ಷಮತೆ :** C-2. 1. : ಮನೆಯಲ್ಲಿ ಹಾಗೂ ಸಮಾಜದಲ್ಲಿ ನಡೆದುಕೊಳ್ಳುವಾಗ ಸಕಾರಾತ್ಮಕ ವರ್ತನೆ ಮಾಡುವುದು. | |
| 1) ಸಕಾರಾತ್ಮಕ ವರ್ತನೆ | 8) ಕುಟುಂಬದಲ್ಲಿಯ ವ್ಯಕ್ತಿಗಳ ಸಕಾರಾತ್ಮಕ ವರ್ತನೆಗಳ ನಿರೀಕ್ಷಣೆ ಮಾಡುತ್ತಾನೆ. |
| 2) ಅನುಕರಣ | 9) ಕುಟುಂಬದಲ್ಲಿಯ ವ್ಯಕ್ತಿಗಳ ಸಕಾರಾತ್ಮಕ ವರ್ತನೆಗಳ ಅನುಕರಣ ಮಾಡುತ್ತಾನೆ. |
| 3) ಕುಟುಂಬ ಹಾಗೂ ಸುರಕ್ಷೆ | 10) ಕುಟುಂಬದ ಸುರಕ್ಷಿತತೆಯನ್ನು ತಿಳಿದು ಅದರ ತಕ್ಕಂತೆ ವರ್ತಿಸುತ್ತಾನೆ. |
| **ಘಟಕ** – ಸಮಾಜ | |
| 1) ಸಾಮಾಜಿಕ ವರ್ತನೆಯ ನಿಯಮ | 11) ಸಮಾಜ ವರ್ತನೆಯ ನಿಯಮಗಳನ್ನು ತಿಳಿದು ಅದರ ತಕ್ಕಂತೆ ವರ್ತಿಸುತ್ತಾನೆ. |
| 2) ತುರ್ತು ಪರಿಸ್ಥಿತಿಯಲ್ಲಿಯ ವರ್ತನೆ | 12) ತುರ್ತು (ಆಪತ್ಕಾಲಿನ) ಪರಿಸ್ಥಿತಿಯ ಅರ್ಥ ತಿಳಿದುಕೊಳ್ಳುತ್ತಾನೆ. |
| 3) ಸ್ವಸುರಕ್ಷೆ | 13) ಸ್ವ-ಸುರಕ್ಷಿತತೆಯ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಾನೆ. |
| **ಅಭ್ಯಾಸಕ್ರಮ ಧ್ಯೇಯ :** CG-3 : ವಿವಿಧ ವ್ಯವಸಾಯಿಕರ/ಕೆಲಸಗಾರರ ಕೆಲಸದ ಬಗ್ಗೆ ಉತ್ಸುಕತೆ ಹಾಗೂ ಆಸಕ್ತಿ ತೋರಿಸುವುದು. | |
| **ಅಭ್ಯಾಸಕ್ರಮ ಕ್ಷಮತೆ :** C-3.1 : ಪರಿಸರದಲ್ಲಿಯ ವ್ಯವಸಾಯ ಹಾಗೂ ವ್ಯವಸಾಯಕರ ಕೆಲಸದ ಬಗ್ಗೆ ಮಾಹಿತಿ ಪಡೆಯುವುದು. | |
| **ಘಟಕ :** ಪರಿಸರದಲ್ಲಿಯ ವ್ಯವಸಾಯಗಳ ಪರಿಚಯ | |
| 1) ವ್ಯವಸಾಯಗಳ ಪರಿಚಯ | 14) ಪರಿಸರದಲ್ಲಿಯ ವ್ಯವಸಾಯಗಳ ಪರಿಚಯ ಮಾಡಿಕೊಳ್ಳುತ್ತಾನೆ. |
| 2) ಪರಿಸರದಲ್ಲಿಯ ಪಾರಂಪರಿಕ ವ್ಯವಸಾಯ | 15) ಪರಿಸರದಲ್ಲಿಯ ಪಾರಂಪರಿಕ ವ್ಯವವಸಾಯಗಳ ಮಾಹಿತಿ ಮಾಡಿಕೊಳ್ಳುತ್ತಾನೆ (ತೆಗೆದುಕೊಳ್ಳುತ್ತಾನೆ). |
| 3) ಪರಿಸರದಲ್ಲಿಯ ಆಧುನಿಕ ವ್ಯವಸಾಯ | 16) ಪರಿಸರದಲ್ಲಿಯ ಪಾರಂಪರಿಕ ಹಾಗೂ ಆಧುನಿಕ ವ್ಯವಸಾಯ ಇವುಗಳಲ್ಲಿಯ ಭಿನ್ನತೆ ತಿಳಿದು ಮಾಹಿತಿ ಪಡೆದುಕೊಳ್ಳುತ್ತಾನೆ. |
| 4) ವ್ಯವಸಾಯದಲ್ಲಿ ಭಿನ್ನತೆ | 17) ಪಾರಂಪರಿಕ ಹಾಗೂ ಆಧುನಿಕ ವ್ಯವಸಾಯ ಇವುಗಳ ಭಿನ್ನತೆ ಹೇಳುತ್ತಾನೆ. |
| 5) ಶ್ರಮ ಪ್ರತಿಷ್ಠೆ (ಕಾಯಕ ಗೌರವ) | 18) ಪರಿಸರದಲ್ಲಿಯ ವ್ಯವಸಾಯಿಕ/ಕುಶಲಕರ್ಮಿಗಳ ಕೆಲಸಗಳನ್ನು ಆದರಿಸುತ್ತಾನೆ. |
| **ಅಭ್ಯಾಸಕ್ರಮ ಕ್ಷಮತೆ :** C-3.2 : ಪರಿಸರದಲ್ಲಿಯ ಸಜೀವಗಳ ಆಧಾರಿತ ಉತ್ಪಾದಕ ಕಾರ್ಯಗಳ ಬಗ್ಗೆ ತಿಳಿದುಕೊಳ್ಳುವುದು. | **ಘಟಕ:** ನಿಸರ್ಗ ಒಂದು ಮೂಲ |
| **ಉಪಘಟಕ** | **ಅಧ್ಯಯನ ನಿಷ್ಪತ್ತಿ** (LOs) |
| 1) ಹಿತ್ತಲ ತೋಟ | 19) ಹಿತ್ತಲತೋಟ ಕೆಲಸದ ಬಗ್ಗೆ ಮಾಹಿತಿ ತೆಗೆದುಕೊಳ್ಳುತ್ತಾನೆ. |
| 2) ಪಶುಪಕ್ಷಿಗೆ ಸಂಬಂಧಿಸಿದ ವ್ಯವಸಾಯ | 20) ಪಶುಪಕ್ಷಿಗಳಿಗೆ ಸಂಬಂಧಿಸಿದ ವ್ಯವಸಾಯಗಳ ಬಗ್ಗೆ ಮಾಹಿತಿ ತೆಗೆದುಕೊಳ್ಳುತ್ತಾನೆ. |
| **ಅಭ್ಯಾಸಕ್ರಮ ಧ್ಯೇತಯ :** CG-4 : ವಿವಿಧ ಕೌಶಲ್ಯಗಳ ವಿಕಾಸ ಗೊಳಿಸುವುದು. | |
| **ಅಭ್ಯಾಸಕ್ರಮ ಕ್ಷಮತೆ :** C-4.1 ಹಸ್ತ, ಸಂಭಾಷಣೆ ಹಾಗೂ ತಾಂತ್ರಿಕ ಕೌಶಲ್ಯ ವಿಕಸಿತ ಗೊಳಿಸುವುದು. | **ಘಟಕ:** ಕೌಶಲ್ಯ ವಿಕಾಸ |
| 1) ಹಸ್ತಕೌಶಲ್ಯ | 21) ದೈನಂದಿನ ಕೆಲಸದಸಲುವಾಗಿ ಅವಶ್ಯಕವಿರುವ ಕೌಶಲ್ಯಗಳನ್ನು ತಿಳಿದುಕೊಳ್ಳುವನು. |
| | 22) ಹಸ್ತ ಕೌಶಲ್ಯದ ಉಪಯೋಗ ಮಾಡಿ ವಿವಿಧ ವಸ್ತುಗಳನ್ನು ತಯಾರಿಸುವನು. |
| 2) ಸಂಭಾಷಣೆ ಕೌಶಲ್ಯ | 23) ಸಂಭಾಷಣ ಕೌಶಲ್ಯದ ಉಪಯೋಗ ಮಾಡಿ ಸಂವಾದ ಸಾಧಿಸುವನು. |
| 3) ತಾಂತ್ರಿಕ ಕೌಶಲ್ಯ | 24) ದೈನಂದಿನ ಉಪಯೋಗದಲ್ಲಿರುವ ವಸ್ತುಗಳಲ್ಲಿಯ ತಂತ್ರಜ್ಞಾನ ತಿಳಿದು ಅವುಗಳ ಯೋಗ್ಯ ಉಪಯೋಗ ಮಾಡುವನು. |

# ಅನುಕ್ರಮಣಿಕೆ


| ಅ.ಕ್ರ. | ಘಟಕ | ಪುಟ |
|---|---|---|
| 1. | ದೈನಂದಿನ ಕೆಲಸಗಳು | 1 |
| 2. | ಸಾಧನಗಳ ಉಪಯೋಗ | 3 |
| 3. | ಮನೆಗೆಲಸದಲ್ಲಿ ಸಹಾಯ | 7 |
| 4. | ಅಡುಗೆಯ ಕಲೆ (ಪಾಕಕಲೆ) | 10 |
| 5. | ನನ್ನ ಪರಿಸರ | 11 |
| 6. | ಹಿತ್ತಲ ತೋಟ | 14 |
| 7. | ಪರಿಸರದಲ್ಲಿಯ ವ್ಯಕ್ತಿ ಹಾಗೂ ಅವರ ಕೆಲಸಗಳು | 20 |
| 8. | ಕೆಲಸಗಳ ಉಪಯೋಗ | 25 |
| 9. | ಹಸ್ತಕೌಶಲ್ಯ | 29 |
| 10. | ನಮ್ಮ ವರ್ತನೆ: ಸಕಾರಾತ್ಮಕ ವರ್ತನೆ | 32 |
| 11. | ಕುಟುಂಬ ಹಾಗೂ ಸುರಕ್ಷಿತತೆ | 35 |
| 12. | ಸಾಮಾಜಿಕ ವರ್ತನೆಯ ನಿಯಮ | 39 |
| 13. | ತುರ್ತುಪರಿಸ್ಥಿತಿಯಲ್ಲಿಯ ವರ್ತನೆ | 43 |
| 14. | ಸ್ವ-ಸುರಕ್ಷಿತತೆ ಒಳ್ಳೆಯ ಸ್ಪರ್ಶ/ಕೆಟ್ಟ ಸ್ಪರ್ಶ | 45 |
| 15. | ಪರಿಸರದಲ್ಲಿಯ ವ್ಯವಸಾಯಗಳ ಪರಿಚಯ | 48 |
| 16. | ಶ್ರಮ ಪ್ರತಿಷ್ಠೆ | 56 |
| 17. | ಹಸ್ತಕೌಶಲ್ಯ | 57 |
| 18. | ಪಶು-ಪಕ್ಷಿಗಳಿಗೆ ಸಂಬಂಧಿಸಿದ ವ್ಯವಸಾಯ | 59 |
| 19. | ಮೀನುಗಾರಿಕೆ | 64 |
| 20. | ಅವಶ್ಯಕ ಕೌಶಲ್ಯಗಳು | 66 |
| 21. | ತಂತ್ರಜ್ಞಾನದಲ್ಲಿಯ ಬದಲಾವಣೆ | 74 |
| 22. | ಸಂಗಣಕದ ಭಾಗಗಳ ಪರಿಚಯ | 76 |


**ಸೂಚನೆ:** ವಿಶೇಷ ಅವಶ್ಯಕತೆ ಇರುವ ವಿದ್ಯರ್ಥಿಗಳಿಗಾಗಿ ಅಧ್ಯಯನ-ಅಧ್ಯಾಪನದ ಪ್ರಕ್ರಿಯೆ ಮಾಡುವಾಗ ಸಾಂಕೇತಿಕ ಭಾಷೆಯ (ಸಾಯಿನ್ ಲಾಂಗವೇಜ) ಅದರಂತೆ ಅನ್ಯ ಪೂರಕ ಅಧ್ಯಾಪನ ಪದ್ಧತಿಯ ಉಪಯೋಗ ಮಾಡಬೇಕು. ವಿಶೇಷ ಅವಶ್ಯಕತೆ ಇರುವ ಮಕ್ಕಳು ಯಾವ ರೀತಿಯಲ್ಲಿ ಸಾಧ್ಯವೋ, ಆ ಪದ್ಧತಿಯಲ್ಲಿ ವ್ಯಕ್ತವಾಗಲು ಅವರಿಗೆ ಅವಕಾಶ ನೀಡಬೇಕು.

# 1. ದೈನಂದಿನ ಕೆಲಸಗಳು

ಯಾವ ಕೆಲಸಗಳು ದಿನಾಲು ಮಾಡಬೇಕಾಗುವವೋ ಅಂತಹ ಕೆಲಸಗಳಿಗೆ ದೈನಂದಿನ ಕೆಲಸಗಳು ಎನ್ನುವರು. ಈ ಕೆಲಸಗಳು ಸರಿಯಾದ ಸಮಯಕ್ಕೆ ಹಾಗೂ ಚೆನ್ನಾಗಿ ಮಾಡಿದಾಗ ನಮ್ಮ ಜೀವನ ಶಿಸ್ತುಬದ್ಧ ಹಾಗೂ ಆನಂದಮಯವಾಗುತ್ತದೆ. ನಮಗೆ ಒಳ್ಳೆಯ ರೂಢಿಗಳು ಅಭ್ಯಾಸವಾಗುತ್ತವೆ. ಮತ್ತು ನಾವು ನಿರೋಗಿ ಹಾಗೂ ಜವಾಬ್ದಾರಿಯುತರಾಗುತ್ತೆವೆ ಆದ್ದರಿಂದ ದೈನಂದಿನ ಕೆಲಸಗಳಿಗೆ ನಮ್ಮ ಜೀವನದಲ್ಲಿ ಬಹಳ ಮಹತ್ವ ಇದೆ.

## ನನ್ನ ಕೃತಿ

**2. ಕೊಟ್ಟ ಚಿತ್ರಗಳ ನಿರೀಕ್ಷಣೆ ಮಾಡು. ಯಾರು ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಹರಟೆ ಹೊಡೆ.**













## 2. 2. ಯಾರು ಏನು ಮಾಡುತ್ತಾರೆ ?

**ಚಿತ್ರದ ನಿರೀಕ್ಷಣೆ ಮಾಡಿ ಯಾರು ಯಾವ ಕೆಲಸ ಮಾಡುತ್ತಿದ್ದಾರೆ ಅದನ್ನು ನಿನ್ನ ಶಬ್ದಗಳಲ್ಲಿ ಬರೆ.**

1) ಅಜ್ಜಿ – ..........................................................

2) ಅಕ್ಕ – ..........................................................

3) ತಂದೆ – ..........................................................

4) ಅಜ್ಜ – ..........................................................

5) ತಾಯಿ – ..........................................................

6) ಅಣ್ಣ – ..........................................................

**3. ನಿಮ್ಮ ಮನೆಯಲ್ಲಿಯ ವ್ಯಕ್ತಿಗಳು ಯಾವ-ಯಾವ ಕೆಲಸಗಳು ಮಾಡುತ್ತಾರೆ ಇದರ ಮಾಹಿತಿ ಕೆಳಗಿನ ಬಿಟ್ಟ ಚೌಕಟ್ಟಿನಲ್ಲಿ ಬರೆ.**




ಅ. ಧ್ಯೆ. 1
ಕ್ಷ. 1.1
ಅ. ನಿ. 1

• ಮನೆಯಲ್ಲಿ ದೈನಂದಿನ ಕೆಲಸಗಳ ಬಗ್ಗೆ ಹರಟೆ ಹೊಡೆಯುವುದು.

# 2. ಸಾಧನಗಳ ಉಪಯೋಗ

ನಾವು ಪ್ರತಿದಿನ ಹಲವಾರು ಕೆಲಸಗಳು ಮಾಡುತ್ತೇವೆ. ಈ ಕೆಲಸಗಳು ಮಾಡುವ ಸಲುವಾಗಿ ವಿವಿಧ ವಸ್ತುಗಳು ಬೇಕಾಗುತ್ತವೆ. ಇಂತಹ ವಸ್ತುಗಳಿಗೆ ಸಾಧನಗಳು ಎನ್ನುತ್ತಾರೆ. ಹಾಗಿದ್ದರೆ ನಡೆಯಿರಿ ಕೆಲವು ಸಾಧನಗಳ ಪರಿಚಯ ಮಾಡಿಕೊಳ್ಳೋಣ.


ಚಪಾತಿ ಮಣೆ


ಪೊರಕೆ


ಹಂಚು


ತಾಂಬಾಣ


ಕಸಬರಿಗೆ


ಬಕೇಟು


ಶೌಚಾಲಯ ತೊಳೆಯುವ ಬ್ರಶ


ನೀರುಣಿಸುವ ಪಾತ್ರೆ


ಕುರುಪೆ


ಬುಟ್ಟಿ


ದೊಡ್ಡ ಪಾತ್ರೆ


ಹಣಿಗೆ/ ಬಾಚಣಿಗೆ

## ನನ್ನ ಕೃತಿ



**1. ಚಿತ್ರಗಳ ನಿರೀಕ್ಷಣೆ ಮಾಡು. ಚಿತ್ರಗಳಲ್ಲಿಯ ವಸ್ತುಗಳ ಹೆಸರು ಹೇಳು ಹಾಗೂ ಉಪಯೋಗ ಬರೆ.**

| ವಸ್ತು (ಚಿತ್ರ) | ವಸ್ತುಗಳ ಹೆಸರು | ಉಪಯೋಗ |
|---|---|---|
|  | | |
|  | | |
|  | | |
|  | | |

| | | |
|---|---|---|
|  | | |
|  | | |
|  | | |

**2. ಮನೆಯಲ್ಲಿಯ ದೈನಂದಿನ ಕೆಲಸದ ಸಲುವಾಗಿ ಬೇಕಾಗುವ ಸಾಧನಗಳ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸು ಮತ್ತು ಅದರ ಕೆಳಗೆ ಹೆಸರು ಹಾಗೂ ಉಪಯೋಗ ಬರೆ.**

| | | |
|---|---|---|
| ಹೆಸರು .................... | ಹೆಸರು .................... | ಹೆಸರು .................... |
| ಉಪಯೋಗ .................... | ಉಪಯೋಗ .................... | ಉಪಯೋಗ .................... |
| ಹೆಸರು .................... | ಹೆಸರು .................... | ಹೆಸರು .................... |
| ಉಪಯೋಗ .................... | ಉಪಯೋಗ .................... | ಉಪಯೋಗ .................... |
| ಹೆಸರು .................... | ಹೆಸರು .................... | ಹೆಸರು .................... |
| ಉಪಯೋಗ .................... | ಉಪಯೋಗ .................... | ಉಪಯೋಗ .................... |

## 3. ನನ್ನ ಜೊತೆಗಾರ ನನ್ನು ಹುಡುಕು

ಚಪಾತಿ



ಗ್ಯಾಸ ಒಲೆ



ಪುರಿ



ಹೂವಿನ ಗಿಡ



ಮಣ್ಣು



ಹುಲ್ಲು



ಕಡಾಯಿ



ನೀರುಣಿಸುವ ಕ್ಯಾನ್



ಹಂಚು



ಅಗ್ನಿ ಪೊಟ್ಟಣ



ಹುಲ್ಲು ಕತ್ತರಿಸುವ ಕತ್ತರಿ



ಬುಟ್ಟಿ



## 4. ಗುರುತಿಸಿ ನೋಡೋಣ - ನಾನಾರು ?

1) ಚಪಾತಿ-ರೊಟ್ಟಿಯ ಹಿಟ್ಟು ನಾದಲು ಉಪಯೋಗಿಸುತ್ತಾರೆ. ..............................

2) ಹೂವುಗಿಡಗಳಿಗೆ ನೀರು ಹಾಕಲು ಉಪಯೋಗಿಸುತ್ತಾರೆ. ..............................

3) ಗಿಡ ನೇಡುವಾಗ ತಗ್ಗು ಅಗೆಯಲು ಉಪಯೋಗಿಸುತ್ತಾರೆ. ..............................

4) ಕಾಳುಗಳು ಕುಟ್ಟಲು ಉಪಯೋಗಿಸುತ್ತಾರೆ. ..............................

5) ಬಿಸಿ ಪಾತ್ರೆ ಎತ್ತಲು ಉಪಯೋಗಿಸುತ್ತಾರೆ. ..............................

6) ಹೆರಚಲು (ತುರಿಯಲು) ಉಪಯೋಗಿಸುತ್ತಾರೆ. ..............................

7) ವಿದ್ಯುತ ಇಲ್ಲದಿರರುವಾಗ ಮಸಾಲೆ ರುಬ್ಬಲು ಉಪಯೋಗಿಸುತ್ತಾರೆ. ..............................

8) ಅಸ್ವಚ್ಛ ಕೈಗಳ ಸ್ವಚ್ಛ ಮಾಡಲು ಉಪಯೋಗಿಸುತ್ತಾರೆ. ..............................

9) ಧ್ಯಾನ ತೂರುವುದಕ್ಕೆ ಉಪಯೋಗಿಸುತ್ತಾರೆ. ..............................

10) ಗ್ಯಾಸ ಒಲೆ (ಅಡುಗೆ ಒಲೆ) ಅಥವಾ ಒಲೆ ಹಚ್ಚಲು ಉಪಯೋಗಿಸುತ್ತಾರೆ. ......................



- ಹರಟೆ ಹೊಡೆಯುದರ ಮೂಲಕ ವಿದ್ಯಾರ್ಥಿಗಳ ಮನೆಯಲ್ಲಿ ಅಡುಗೆ,ಸ್ವಚ್ಛತೆ, ತೋಟಗಾರಿಕೆ ಈ ಕೆಲಸದ ಸಲುವಾಗಿ ಯಾವ ಸಾಧನಗಳು ಉಪಯೋಗಿಸುವರು ಎಂಬುದನ್ನು ಹೇಳುವುದು. ಅವುಗಳ ಪಟ್ಟಿ ತಯಾರಿಸಿಕೊಳ್ಳುವುದು.

ಅ. ಧ್ಯೆ. 1
ಕ್ಷ. 1.2
ಅ. ನಿ. 2, 3

# 3. ಮನೆಗೆಲಸದಲ್ಲಿ ಸಹಾಯ

ಮನೆಯಲ್ಲಿ ಎಲ್ಲ ವ್ಯಕ್ತಿಗಳು ಕೆಲಸದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಅದರಿಂದ ಕೆಲಸಗಳು ಬೇಗನೆ ಆಗುತ್ತವೆ. ಜವಾಬ್ದಾರಿಯ ಭಾವನೆ ತಯಾರಾಗುತ್ತದೆ. ಸ್ವಚ್ಛತೆ ಹಾಗೂ ಅಚ್ಚುಕಟ್ಟುತನದ ಅಭ್ಯಾಸವಾಗುತ್ತದೆ. ಕುಟುಂಬದಲ್ಲಿ ಪ್ರೇಮ ಹಾಗೂ ಸಹಕಾರ್ಯ ಬೆಳೆಯುತ್ತದೆ.

## ನನ್ನ ಕೃತಿ

### 1. ಹಾಡು ಹಾಡೋಣ

ನಡೆಯಿರಿ ನಾವೆಲ್ಲರೂ ವಿಚಾರ ಮಾಡೋಣ
ಮನೆಯಲ್ಲಿಯ ಕೆಲಸದಲ್ಲಿ ಸಹಾಯ ಮಾಡೋಣ ॥

ತಾಯಿ-ಅಜ್ಜಿ ಅಡುಗೆ ಮಾಡುವರು, ಅವರಿಗೆ ಸಹಾಯ ಮಾಡೋಣ
ಅಡುಗೆ ಮಾಡಿ ಎಲ್ಲರೂ ಊಟಕ್ಕೆ ಕೂಡೋಣ ॥

ಅಣ್ಣನು ತರಕಾರಿ ಆರಿಸುವನು, ನಾವು ಕೂಡಾ ಆರಿಸೋಣ
ಅಣ್ಣನಿಗೆ ಸಹಾಯ ಮಾಡೋಣ ॥

ಅಜ್ಜ ಹೂದೋಟದಲ್ಲಿ ಕೆಲಸ ಮಾಡುತ್ತಾರೆ, ಅವರಿಗೆ ಸಹಾಯ ಮಾಡೋಣ
ಗಿಡಗಳಿಗೆ ನೀರು ಹಾಕಿ, ಗಿಡಗಳು ಬೆಳಿಸೋಣ ॥

ಚಿಕ್ಕಪ್ಪ-ಅಪ್ಪ ತರಕಾರಿ ತರುತ್ತಾರೆ, ಬಟ್ಟೆಯ ಕೈಚೀಲ ಕೊಡೋಣ
ಕೈಚೀಲ ಎತ್ತಿ ಇಬ್ಬರಿಗೂ ಸಹಾಯ ಮಾಡೋಣ ॥

ಅಕ್ಕ-ಚಿಕ್ಕಮ್ಮ ರಂಗೋಲಿ ತೆಗೆಯುತ್ತಾರೆ ಅವರಿಗೆ ಸಹಾಯ ಮಾಡೋಣ
ಬಣ್ಣ ತುಂಬಿ ರಂಗೋಲಿ ಸುಂದರ ಮಾಡೋಣ ॥

ಮನೆಗೆಲಸದಲ್ಲಿ ಸಹಾಯ ಮಾಡೋಣ
ಸಹಾಯ ಮಾಡಿ ಎಲ್ಲರಿಗೂ ಆನಂದ ನಿಡೋಣ ॥

• ಹಾಡು ರಾಗಬದ್ಧವಾಗಿ ಹಾಡಿಸಿಕೊಳ್ಳಿ. ಮನೆಗೆಲಸದಲ್ಲಿ ಸಹಾಯ ಮಾಡುವುದರಿಂದ ಆಗುವ ಲಾಭಗಳನ್ನು ತಿಳಿಸಿ ಹೇಳುವುದು.

2. ಕೆಳಗಿನ ಚಿತ್ರಗಳಲ್ಲಿ ಮನೆಯಲ್ಲಿಯ ವ್ಯಕ್ತಿಗಳು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ. ಅದರಲ್ಲಿ ನೀನು ಸಹಾಯ ಮಾಡುತ್ತಿರುವ ಕೆಲಸದ ಚಿತ್ರಗಳ ಮುಂದೆ ✓ ಹೀಗೆ ಗುರುತು ಮಾಡು.

















**3. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

1. ನೀನು ಮನೆಗೆಲಸದಲ್ಲಿ ಸಹಾಯ ಮಾಡುತ್ತೀಯಾ ?

..........

2. ನೀನು ಸಹಾಯ ಮಾಡುತ್ತಿರುವ 5 ಕೆಲಸಗಳ ಪಟ್ಟಿ ಮಾಡು.

..........

..........

..........

..........

..........



ಅ. ಧ್ಯೆ. 1

ಕ್ಷ. 1.1

ಅ. ನಿ. 4

• ವಿದ್ಯಾರ್ಥಿಗಳಿಂದ ಮನೆಯಲ್ಲಿಯ ಕೆಲಸಗಳನ್ನು ಮಾಡುವ ನಾಟ್ಯಕರಣ ಮಾಡಿಸಿಕೊಳ್ಳಿರಿ.

# 4. ಅಡುಗೆ ಕಲೆ

ಮನೆಯಲ್ಲಿ ಉಪಲಬ್ಧವಿರುವ ಪದಾರ್ಥಗಳ ಉಪಯೋಗ ಮಾಡಿ ರುಚಿಕರ ಪದಾರ್ಥ ತಯಾರಿಸಲು ಬರುತ್ತದೆ. ಅದರಲ್ಲಿ ಪೌಷ್ಟಿಕಾಂಶವೂ ದೊರೆಯುತ್ತವೆ. ಈ ರೀತಿ ನಾವು ಇಂಧನ ರಹಿತ ಅಡುಗೆ ಮಾಡುವವರಿದ್ದೇವೆ.

## ನನ್ನ ಕೃತಿ

ಕೆಳಗಿನ ಚಿತ್ರಗಳ ನಿರೀಕ್ಷಣೆ ಮಾಡು ಹಾಗೂ ಉಪಲಬ್ಧ ಸಾಹಿತ್ಯ ಹಾಗೂ ಸಾಧನಗಳ ಉಪಯೋಗ ಮಾಡಿ ದಪ್ಪ ಅವಲಕ್ಕಿ (ದೊಡೆ ಪೋಹೆ) ತಯಾರಿಸು.

### ಸಾಹಿತ್ಯ ಹಾಗೂ ಸಾಧನಗಳು

ಅವಲಕ್ಕಿ, ಈರುಳ್ಳಿ, ಮೆಣಸಿನಕಾಯಿ, ಖಾರ ಕಡಲೆಕಾಯಿ, ಸಕ್ಕರೆ, ಉಪ್ಪು, ಲಿಂಬೆಹಣ್ಣು, ಟೋಮ್ಯಾಟೊ, ಹಸಿಕೊಬ್ಬರಿ (ತೆಂಗಿನಕಾಯಿ) ತುರಿ, ಚಮಚ, ಬಟ್ಟಲು ಹಾಗೂ ಪಾತ್ರೆಗಳು.



1. ಪಾತ್ರೆಯಲ್ಲಿ ಅವಲಕ್ಕಿ ತೆಗೆದುಕೊಳ್ಳು.




2. ಈರುಳ್ಳಿ, ಟೋಮ್ಯಾಟೊ, ಮೆಣಸಿನಕಾಯಿ ಹೆಚ್ಚಿಕೊಳ್ಳು



3.ಅವಲಕ್ಕಿಯಲ್ಲಿ ಹೆಚ್ಚಿದ ಈರುಳ್ಳಿ, ಟೋಮ್ಯಾಟೋ, ಮೆಣಸಿನಕಾಯಿ, ಕಡಲೆಕಾಯಿ, ತುರಿದ ತೆಂಗಿನಕಾಯಿ, ಸಕ್ಕರೆ, ಉಪ್ಪು ಒಟ್ಟಿಗೆ ಸೇರಿಸು ಹಾಗೂ ಲಿಂಬೆಹಣ್ಣಿನ ರಸ ಸೇರಿಸಿ ಚೆನ್ನಾಗಿ (ಕೂಡಿಸು) ಕಲಿಸು.



4. ಅವಲಕ್ಕಿಯ ಪಾತ್ರೆಯ ಮೇಲೆ ಒಂದು ತಟ್ಟೆ ಮುಚ್ಚು



5. ಮುಚ್ಚಿದ ತಟ್ಟೆಯ ಮೇಲೆ ಭಾರವಾದ ವಸ್ತು ಇಟ್ಟು 15 ನಿಮಿಷಗಳ ವರೆಗೆ ಹಾಗೆ ಇಡು.



6. ತಯಾರಾಗಿರುವ ಅವಲಕ್ಕಿ.

ಅ. ಧ್ಯೆ. 4
ಕ್ಷ. 4.1
ಅ. ನಿ. 22

- ಅವಲಕ್ಕಿ ತಯಾರಿಸುವ ಸಲುವಾಗಿ ಬೇಕಾಗುವ ಸಾಹಿತ್ಯ ತರಲು ಹೇಳಿ ವರ್ಗದಲ್ಲಿ ಸ್ವಂತದ ಉಪಸ್ಥಿತಿಯಲ್ಲಿ ಅವಲಕ್ಕಿ ತಯಾರಿಸಕೊಳ್ಳಬೇಕು.

# 5. ನನ್ನ ಪರಿಸರ

ನಮ್ಮ ಮನೆ ಹಾಗೂ ಅದರ ಸುತ್ತಮುತ್ತಲಿನ ಭಾಗ ಎಂದರೆ ಪರಿಸರ. ಇದರಲ್ಲಿ ಶಾಲೆ, ರಸ್ತೆಗಳು, ಮನೆಗಳು, ಗಿಡಗಳು, ಉದ್ಯಾನಗಳು, ಪ್ರಾಣಿ, ಪಕ್ಷಿ, ಹೊಲ, ಮಣ್ಣು, ಕಲ್ಲು-ಮುಳ್ಳುಗಳು, ನದಿ, ಚರಂಡಿಗಳು, ಆಸ್ಪತ್ರೆ, ಬಸ್ಸ ನಿಲ್ದಾಣ ಹೀಗೆ ಎಲ್ಲ ಸಜೀವ ಹಾಗೂ ನಿರ್ಜೀವ ಘಟಕಗಳು ಬರುತ್ತವೆ.

**1. ಪಟ್ಟಣದ ಪರಿಸರ**




ಶಾಲೆ

## ನನ್ನ ಕೃತಿ

### 1. ಕೊಟ್ಟ ಚಿತ್ರದ ಬಗ್ಗೆ ಚರ್ಚೆ ಮಾಡು.

1. ಕೊಟ್ಟ ಎರಡು ಚಿತ್ರಗಳಲ್ಲಿಯ ವ್ಯತ್ಯಾಸ ಹೇಳು ?
2. ಚಿತ್ರದಲ್ಲಿಯ ಮನೆಯ ಹತ್ತಿರ ಏನು ಕಾಣಿಸುತ್ತದೆ ?
3. ನಿನಗೆ ಶಾಲೆಯಿಂದ ಮನೆಗೆ ಬರುವಾಗ ಏನು ಕಾಣುತ್ತದೆ ?
4. ನಿನ್ನ ಪರಿಸರದಲ್ಲಿಯ ಕಡಿಮೆ ಎಂದರೂ ಐದು ಘಟಕಗಳ ಹೆಸರುಗಳನ್ನು ಹೇಳು ?

### 2. ನಿನ್ನ ಪರಿಸರದ ಚಿತ್ರ ತೆಗೆ.

ಅ. ಧ್ಯೆ. 1
ಕ್ಷ. 1.2
ಅ. ನಿ. 5

- ಪಟ್ಟಣದ ಪರಿಸರ ಹಾಗೂ ಗ್ರಾಮೀಣ ಪರಿಸರ ಇವುಗಳಲ್ಲಿಯ ವ್ಯತ್ಯಾಸ ತಿಳಿಸಿ ಹೇಳುವುದು.

# 6. ಹಿತ್ತಲು ತೋಟ

ಮನೆ, ಶಾಲೆ ಅಥವಾ ಪರಿಸರದಲ್ಲಿ ಉಪಲಬ್ಧ ವಿರುವ ಸ್ಥಳದಲ್ಲಿ ಸಸಿಗಳನ್ನು ನೆಟ್ಟು ತಯಾರಿಸಿದ ಸಣ್ಣ ತೋಟ ಎಂದರೆ ಹಿತ್ತಲು ತೋಟ. ಹಿತ್ತಲು ತೋಟದಲ್ಲಿ ಕಡಿಮೆ ಪ್ರಮಾಣದಲ್ಲಿ ತರಕಾರಿ, ಹಣ್ಣುಗಳನ್ನು ಹಚ್ಚಲಾಗುತ್ತದೆ. ಹಿತ್ತಲು ತೋಟದಲ್ಲಿ ಹಣ್ಣು ತರಕಾರಿಗಳು, (ಕಾಯಿಪಲ್ಲೆಗಳು) ಪಲ್ಯದ ಸೊಪ್ಪುಗಳು, ಔಷಧಿ ವನಸ್ಪತಿ, ಹಣ್ಣುಗಳ ಗಿಡಗಳನ್ನು ಹಚ್ಚುತ್ತಾರೆ. ಉದಾ. ಚವಳೆಕಾಯಿ, ಭೆಂಡೆಕಾಯಿ, ಗಿಡಮೂಲಿಕೆ ಚಹಾ, ಟೋಮ್ಯಾಟೊ, ಸವತೆಕಾಯಿ, ಲಿಂಬೆಹಣ್ಣು, ಅಜ್ವನ, ಹಸಿಶುಂಠಿ, ತುಪ್ಪಹೀರೆಕಾಯಿ (ತಿಪ್ರಿಕಾಯಿ), ಹಾಗಲಕಾಯಿ, ತೆಂಗಿನಕಾಯಿ, ಪೇರಲ, ಸೀತಾಫಲ, ತುಳಸಿ, ಹೂವಿನ ಗಿಡಗಳು ಇತ್ಯಾದಿ.

ಇವುಗಳನ್ನು ನೆಟ್ಟರೆ (ಹಚ್ಚಿದರೆ) ನಮಗೆ ತಾಜಾ ಇರುವಂತಹ ಹಣ್ಣು, ಹೂವು, ಎಲೆ, ತರಕಾರಿಗಳು, ಔಷಧಿ ವನಸ್ಪತಿ ದೊರೆಯುತ್ತವೆ.

ಹಿತ್ತಲು ತೋಟದ ನಿರ್ಮಿತಿಸಲುವಾಗಿ ಹಣ್ಣುಗಳ ಸಸಿಗಳು, ಕಾಯಿಪಲ್ಲೆ, ಹೂವುಗಿಡಗಳ ಸಸಿಗಳು ಶಾಸನದ ಸಸಿಕೇಂದ್ರ, ಕೃಷಿ ವಿದ್ಯಾಪೀಠ, ಖಾಸಗಿ ನರ್ಸರಿಯಲ್ಲಿ ಉಪಲಬ್ಧವಾಗುವವು.

ಹಿತ್ತಲು ತೋಟದಿಂದ ಫ್ರೇಶ್ ಆಗಿರುವಂತಹ ಹಣ್ಣು, ತರಕಾರಿಗಳು ದೊರೆಯುತ್ತವೆ. ಇದರಿಂದ ಯೋಗ್ಯ ಪೋಷಣೆ ದೊರೆಯುತ್ತದೆ. ಆರೋಗ್ಯ ಸುಧಾರಿಸಲು ಸಹಾಯವಾಗುವುದು. ಮಾರುಕಟ್ಟೆಯಿಂದ ತರಕಾರಿ, ಹಣ್ಣು ಕೊಂಡುಕೊಳ್ಳುವ ಖರ್ಚು ಕಡಿಮೆಯಾಗುತ್ತದೆ. ಹೆಚ್ಚು ಉತ್ಪಾದನೆ ಆದರೆ ಅವುಗಳನ್ನು ಮಾರಿ ಉತ್ಪನ್ನವು ಪಡೆಯಬಹುದು.



## ನನ್ನ ಕೃತಿ

**1. ನೀನು ಭೇಟಿ ಕೊಟ್ಟ ಹಿತ್ತಲು ತೋಟದಲ್ಲಿಯ ಗಿಡಗಳ ಹೆಸರು ಬರೆ.**

..............................................................................................................................

**2. ಶಾಲೆ ಅಥವಾ ಮನೆಯಲ್ಲಿಯ ಹಿತ್ತಲು ತೋಟದಲ್ಲಿ ನೆಡುವ ಸಲುವಾಗಿ ಯಾವ ಗಿಡಗಳು ಹಾಗೂ ಸಸಿಗಳನ್ನು ಆಯ್ಕೆ ಮಾಡುವೆ?**

..............................................................................................................................

**3. ಶಬ್ದ ಪಟ್ಟಿಯಲ್ಲಿ ಅಡಗಿದ ಔಷಧಿ ವನಸ್ಪತಿಗಳ ಹೆಸರು ಬರೆ.**

| | | | | | |
|---|---|---|---|---|---|
| ಬೇ | ನೆ | ಅ | ಮೃ | ತ | ನಿಂ |
| ವು | ಲ್ಲಿ | ಕ | ಲೋ | ಹ | ಬೆ |
| ಬ್ರಾ | ಕಾ | ತು | ಳ | ಸಿ | ಹು |
| ಹ್ಮಿ | ಯಿ | ಬೇ | ಸ | ಶುಂ | ಲ್ಲು |
| ಕ | ರಿ | ವು | ರ | ಠಿ | ತ |
| ಬೆ | ಲ್ಲ | ಅ | ರಿ | ಶಿ | ಣ |

__________ __________ __________ __________ __________

__________ __________ __________ __________ __________

- ಪರಿಸರದಲ್ಲಿ ಹಿತ್ತಲು ತೋಟ ಅಥವಾ (ಕಾಯಿಪಲ್ಲೆಯ) ತರಕಾರಿ ತೋಟಕ್ಕೆ ಭೇಟಿ ಕೊಟ್ಟು ಅಲ್ಲಿಯ ಕಾಯಿಪಲ್ಲೆ, ಹಣ್ಣುಗಿಡಗಳ ಮಾಹಿತಿ ಮಾಡಿಕೊಡುವುದು.
- ಹಿತ್ತಲು ತೋಟದಲ್ಲಿಯ ಯಾವ ಕಾಯಿಪಲ್ಲೆ, ಹಣ್ಣಿನಗಿಡಗಳು, ಹೂವಿನಗಿಡಗಳು ಕಾಣಿಸುತ್ತವೆ. ಅವುಗಳ ಪಟ್ಟಿ (ಯಾದಿ) ತಯಾರಿಸಲು ಹೇಳುವುದು.
- ಕ್ಷೇತ್ರಭೇಟಿ ಈ ಉಪಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಿದೆ.







## ನನ್ನ ಕೃತಿ

**1. ಹಿತ್ತಲು ತೋಟದಲ್ಲಿಯ ತರಕಾರಿಗಳ ಹೆಸರು ಹೇಳು.**

---

**2. ನಿನಗೆ ಇಷ್ಟವಾಗುವ (ಹಿಡಿಸುವ) ತರಕಾರಿಗಳ ಪಟ್ಟಿ ಮಾಡು.**

---

**3. ನೆಂಟರನ್ನು ಗುರುತಿಸು ಹಾಗೂ ಅದರ ಸುತ್ತಲು ಗೋಲು ಮಾಡು.**

1) ಟೋಮ್ಯಾಟೊ, ಬದನೆಕಾಯಿ, ಮೆಂತೆಪಲ್ಲೆ, ದೊಡ್ಡ ಮೆಣಸಿನಕಾಯಿ.
2) ಹಾಗಲಕಾಯಿ, ಸವತೆಕಾಯಿ, ತಿಪ್ರಿಕಾಯಿ, ಹುಣಸೆಪಲ್ಲೆ.
3) ಪಾಲಕಪಲ್ಲೆ, ಹಸಿಶುಂಠಿ, ಕೊತಂಬರಿ, ಸಬಸ್ಸಿಗೆಪಲ್ಲೆ
4) ಗಜ್ಜರಿ, ಮೂಲಂಗಿ, ಬೆಂಡೆಕಾಯಿ, ಬಿಟ್‌ರೂಟ.

- ಶಾಲೆಯಲ್ಲಿಯ ಹಿತ್ತಲು ತೋಟದ ಗಿಡಗಳಿಗೆ ನೀರು ಹಾಕುವ ನಿಯೋಜನೆಯನ್ನು ಮಾಡುವುದು.
- ಪೋಷಣ ಆಹಾರದ ಸಲುವಾಗಿ ಬೇಕಾಗುವ ತರಕಾರಿಗಳು. ಕಾಯಿಪಲ್ಲೆ, ಹಣ್ಣುಗಿಡಗಳು ಶಾಲೆಯ ಹಿತ್ತಲು ತೋಟದಲ್ಲಿ ನೆಡಲು ಹೇಳುವುದು.
- ಕಾಯಿಪಲ್ಲೆಗಳ ಮಾರುಕಟ್ಟೆ ಅಥವಾ ವಾರದ ಸಂತೆಗೆ ಪಾಲಕರೊಂದಿಗೆ ಭೇಟಿ ಕೊಡಲು ಹೇಳುವುದು.

## ◈ ಕುಂಡಲದಲ್ಲಿಯ ತೋಟಗಾರಿಗೆ

ಒಮ್ಮೊಮ್ಮೆ ಸಸಿ ನೆಡುವ ಸಲುವಾಗಿ ಮನೆ ಅಥವಾ ಶಾಲೆಯಲ್ಲಿ ಜಾಗ (ಸ್ಥಳ) ಉಪಲಬ್ಧ ಇರುವುದಿಲ್ಲ. ಇಂತಹ ಸಮಯದಲ್ಲಿ ಕುಂಡದಲ್ಲಿ ಸಸಿಗಳನ್ನು ನೆಡಲಾಗುತ್ತದೆ.

### ಕುಂಡಗಳ ವಿವಿಧ ಆಕಾರಗಳು





**ನನ್ನಕೃತಿ**

**1. ಚಿತ್ರದಲ್ಲಿಯ ಕುಂಡಕ್ಕೆ ಸುಶೋಭಿಕರಣ ಮಾಡು.**



- ಯಾವ-ಯಾವ ಸಸಿಗಳನ್ನು ಕುಂಡದಲ್ಲಿ ನೆಡಲಾಗುವುದು ಎಂಬುದರ ಬಗ್ಗೆ ಮಾಹಿತಿ ಕೊಡು.
- ಪ್ರಾತ್ಯೇಕ್ಷಿಕವಾಗಿ ಕುಂಡದಲ್ಲಿ ಸಸಿಗಳನ್ನು ನೆಟ್ಟು ತೋರಿಸಬೇಕು.

## ◈ ನನ್ನ ಸಣ್ಣ ಹೂದೋಟ

**ಹಿತ್ತಲ ತೋಟದಲ್ಲಿಯ ಕೆಲಸಗಳು:** ಹಿತ್ತಲ ತೋಟದಲ್ಲಿಯ ಗಿಡಗಳಿಗೆ ನೀರು ಹಾಕುವುದು, ಮಣ್ಣು ಸೊಸುವುದು, ಗೊಬ್ಬರ ಕೂಡಿಸುವುದು, ಕಳೆಗಳನ್ನು ಕೀಳುವುದು, ಬೇಲಿ ಹಾಕುವುದು, ಬೀಜ ಹಚ್ಚುವುದು, ಹೊಸ ಸಸಿ ನೆಡುವುದು, ಸಸಿಗಳ ಬೆಳವಣಿಗೆಯ ನಿರೀಕ್ಷಣೆ ಮಾಡುವುದು. ಇಂತಹ ಕೆಲಸಗಳು ಮಾಡಬೇಕಾಗುತ್ತದೆ. ಈ ಕೆಲಸಗಳು ಮಾಡುವಾಗ ಹಿತ್ತಲು ತೋಟದಲ್ಲಿಯ ಸಾಹಿತ್ಯಗಳನ್ನು ಕಾಳಜಿಪೂರ್ವಕವಾಗಿ ಉಪಯೋಗಿಸುವದು ಹಾಗೂ ಕೆಲಸ ಆದನಂತರ ಸ್ವಂತದ ಸ್ವಚ್ಛತೆ ಮಾಡಿಕೊಳ್ಳುವುದು ಅವಶ್ಯಕ ವಿರುತ್ತದೆ.



### ನನ್ನ ಕೃತಿ

1. ನೀನು ಹಚ್ಚಿರುವಂತಹ ಸಸಿಗೆ ಅದರ ಹೆಸರಿನ ಕಾಗದ ಅಂಟಿಸು.

2. ಹಿತ್ತಲು ತೋಟದಲ್ಲಿ ಕೆಲಸ ಮಾಡುವಾಗ ಬೇಕಾಗುವ ಸಾಹಿತ್ಯಗಳ ಪಟ್ಟಿ ತಯಾರಿಸು.

ಅ. ಧ್ಯೆ. 3
ಕ್ಷ. 3.2
ಅ. ನಿ. 19

• ಹಿತ್ತಲು ತೋಟದಲ್ಲಿ ಕೆಲಸ ಮಾಡುವಾಗ ತೆಗೆದುಕೊಳ್ಳಬೇಕಾಗುವ ದಕ್ಷತೆಗಳ ಬಗ್ಗೆ ಮಾರ್ಗದರ್ಶನ ಮಾಡಬೇಕು.

## ಪಾಲಕ – ಮೆಂತೆಯ ಕೋಸಂಬರಿ

ಹಿತ್ತಲ ತೋಟದಲ್ಲಿ ವಿವಿಧ ಕಾಯಿಪಲ್ಲೆಗಳನ್ನು ಬೆಳೆಸಲಾಗುತ್ತದೆ. ಅದರಲ್ಲಿಯ ಕಾಯಿಪಲ್ಲೆಗಳ ಉಪಯೋಗ ಮಾಡಿ ಪೌಷ್ಟಿಕ ಕೋಸಂಬರಿ ತಯಾರಿಸಲು ಬರುತ್ತದೆ.

### ನನ್ನ ಕೃತಿ

ಕೆಳಗಿನ ಸಾಹಿತ್ಯ ಹಾಗೂ ಸಾಧನಗಳ ಉಪಯೋಗ ಮಾಡಿ ಪಾಲಕ – ಮೆಂತೆಯ ಕೋಸಂಬರಿ ತಯಾರಿಸು.

**ಸಾಹಿತ್ಯ ಹಾಗೂ ಸಾಧನಗಳು**

ಮೆಂತೆಪಲ್ಲೆ, ಪಾಲಕಪಲ್ಲೆ, ಈರುಳ್ಳಿ, ಟೋಮ್ಯಾಟೊ, ಉಪ್ಪು, ಲಿಂಬೆಹಣ್ಣು, ಖಾರ, ಚಾಟ ಮಸಾಲೆ, ಪಾತ್ರೆ, ದೊಡ್ಡ ಚಮಚೆ, ಈಳಿಗೆ ಇತ್ಯಾದಿ.

**ಕೃತಿ :** ಮೆಂತ್ಯೆ ಹಾಗೂ ಪಾಲಕಪಲ್ಲೆಯನ್ನು ಸೊಸುವುದು ಹಾಗೂ ಸ್ವಚ್ಛವಾಗಿ ತೊಳೆದು ನೀರು ಜಾನಲು ಜರಡಿಯಲ್ಲಿ ಇಡುವುದು. ಟೋಮ್ಯಾಟೋ ಕೂಡಾ ತೊಳೆಯಬೇಕು. ಮೆಂತ್ಯೆ ಹಾಗೂ ಪಾಲಕ, ಈರುಳ್ಳಿ, ಟೋಮ್ಯಾಟೊವನ್ನು ಸಣ್ಣದಾಗಿ ಹೆಚ್ಚಬೇಕು ಹಾಗೂ ಒಂದು ಪಾತ್ರೆಯಲ್ಲಿ ಎಲ್ಲ ಹೋಳಿರುವಂತಹ ಪದಾರ್ಥ ಒಟ್ಟುಗೂಡಿಸುವುದು. ಅದರಲ್ಲಿ ರುಚಿಗೆ ತಕ್ಕಷ್ಟು ಉಪ್ಪು, ಖಾರದ ಪುಡಿ ಹಾಗೂ ಸ್ವಲ್ಪ ಚಾಟ ಮಸಾಲೆ ಹಾಕಿ ಚಮಚದಿಂದ ವ್ಯವಸ್ಥಿತವಾಗಿ ಅಲುಗಾಡಿಸುವುದು. ತಯಾರಾದ ಪೌಷ್ಟಿಕ ಹಾಗೂ ರುಚಿಕರ ಮೆಂತೆ–ಪಲಾಕ ಕೋಸಂಬರಿಯನ್ನು ಎಲ್ಲರೂ ಕೂಡಿ ಸವಿಯಬೇಕು.



- ಸಂಬಂಧಿತ ಕೃತಿ ಬರೆಯುವ ಸಲುವಾಗಿ ವಿದ್ಯಾರ್ಥಿಗಳಿಗೆ ಉಪಲಬ್ಧತೆಯನುಸಾರ ಸಾಹಿತ್ಯ ತರಲು ಹೇಳುವುದು.
- ವಿದ್ಯಾರ್ಥಿಗಳ ಸಹಭಾಗದಿಂದ ಕೃತಿ ಮಾಡಿಸಿಕೊಳ್ಳುವುದು.

# 7. ಪರಿಸರದಲ್ಲಿಯ ವ್ಯಕ್ತಿ ಹಾಗೂ ಅವರ ಕೆಲಸಗಳು

ಪರಿಸರದಲ್ಲಿಯ ಅನೇಕ ಜನರು ಬೇರೆ ಬೇರೆ ಕೆಲಸಗಳು ಮಾಡುತ್ತಾರೆ. ಆದ್ದರಿಂದಲೇ ನಮ್ಮ ಜೀವನ ಸರಾಗವಾಗಿ ನಡೆಯುತ್ತದೆ. ಇದರಲ್ಲಿಯ ಕೆಲವು ಕೆಲಸಗಳ ಪರಿಚಯ ಮಾಡಿಕೊಳ್ಳೋಣ.



**ಗೌಳಿಗ**



**ಶಿಂಪಿಗ**



**ಹೂಗಾರ**



**ವೈದ್ಯರು ರೋಗಿಗಳಿಗೆ ತಪಾಸಣೆ ಮಾಡುತ್ತಿರುವಾಗ**



**ಸ್ವಚ್ಛತೆ ಮಾಡುವವ**



**ಹಣ್ಣು ಮಾರುವವ**



**ವೃತ್ತಪತ್ರ ಮಾರುವವ**



**ತೊಟ್ಟಲು ಮನೆ**




**ಮೊಬಾಯಿಲ ಕೇಂದ್ರ**

- ಚಿತ್ರದಲ್ಲಿಯ ವ್ಯವಸಾಯಕರ ಕೆಲಸದ ಬಗ್ಗೆ ಮಾಹಿತಿ ಕೊಡಬೇಕು.

## ನನ್ನ ಕೃತಿ

1. ನಿನ್ನ ಪರಿಸರದಲ್ಲಿ ಕಂಡುಬರುವ ಹಾಗೂ ಅದಕ್ಕಿಂತ ಬೇರೆ ವ್ಯವಸಾಯ ಮಾಡುವ ವ್ಯಕ್ತಿಯ ಬಗ್ಗೆ ಮಾಹಿತಿ ಹೇಳು.
2. ನಿನ್ನ ಪರಿಸರದಲ್ಲಿ ಕಂಡುಬರುವ ಇತರ ವ್ಯಕ್ತಿಗಳ ಕೆಲಸದ ಚಿತ್ರಗಳ ಸಂಗ್ರಹ ಮಾಡು ಹಾಗೂ ಅಂಟಿಸು.

- ವಿವಿಧ ವ್ಯವಸಾಯಕರ ಚಿತ್ರಗಳು ಹಾಗೂ ಫ್ಲಾಶಕಾರ್ಡ ತೋರಿಸಿ ಆ ಉಪಕ್ರಮ ಬಗ್ಗೆ ಮಾಹಿತಿ ಹೇಳುವುದು.

**3. ನನ್ನ ಕೆಲಸ ಗುರುತಿಸು.**



ಕೆಲಸ : ....................................

...........................................



ಕೆಲಸ : ....................................

...........................................



ಕೆಲಸ : ....................................

...........................................



ಕೆಲಸ : ....................................

...........................................



ಕೆಲಸ : ..................................

..........................................



ಕೆಲಸ : ..................................

..........................................



ಕೆಲಸ : ..................................

..........................................



ಕೆಲಸ : ..................................

..........................................

**4. ಬಿಟ್ಟ ಸ್ಥಳದಲ್ಲಿ ಯೋಗ್ಯ ಅಕ್ಷರ ತುಂಬು ಹಾಗೂ ವ್ಯವಸಾಯಕರ ಹೆಸರು ಪೂರ್ಣ ಮಾಡಿ.**

1. ವೈ ______ ______ ಕ

2. ______ ಭಿ ಯಂ ______

3. ಅಂ ______ ______ ______ ರ

4. ಹ ______ ಲ ______ ರ

5. ಕಾ ______ ಖಾ ______ ದಾ ______

6. ಅಂ ______ ಕಾ ______

**5. ನಿನ್ನ ಪರಿಸರದಲ್ಲಿ ಕಂಡುಬರುವ ಇಂತಹ ಕೆಲವು ಕೆಲಸಗಳನ್ನು ಮಾಡುವ ವ್ಯಕ್ತಿಯ ಕೆಲಸಗಳ ಪಟ್ಟಿ ಮಾಡು.**

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

........................................................................................................

- ಪರಿಸರದಲ್ಲಿಯ ವಿವಿಧ ಕೆಲಸಗಳನ್ನು ಮಾಡುವ ವ್ಯಕ್ತಿಗಳನ್ನು ಶಾಲೆಗೆ ಕರೆಯಿಸಿ ಅವರ ಸಂದರ್ಶನ ತೆಗೆದುಕೊಳ್ಳುವ ಅವಕಾಶ ವಿದ್ಯಾರ್ಥಿಗಳಿಗೆ ಉಪಲಬ್ಧ ಮಾಡಿಕೊಡಬೇಕು.

# 8. ಕೆಲಸಗಳ ಉಪಯೋಗ

ನಮ್ಮ ಪರಿಸರದಲ್ಲಿಯ ವ್ಯಕ್ತಿ ಅನೇಕ ಕೆಲಸಗಳನ್ನು ಮಾಡುತ್ತಿರುತ್ತಾರೆ. ಆ ಕೆಲಸಗಳಿಂದ ಒಬ್ಬರಿಂದ ಇನ್ನೊಬ್ಬರಿಗೆ ಸಹಾಯ ವಾಗುತ್ತಿರುತ್ತದೆ. ಆದ್ದರಿಂದ ಪ್ರತಿಯೊಂದು ಕೆಲಸವು ಮಹತ್ವದಾಗಿರುತ್ತದೆ.

## ನನ್ನ ಕೃತಿ

**1. ಕೆಳಗಿನ ಚಿತ್ರದಲ್ಲಿಯ ವ್ಯಕ್ತಿ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿರುತ್ತಾರೆ. ಅದರಲ್ಲಿಯ ಕೆಲಸಗಳ ಹೆಸರು ಹೇಳಿ ಹಾಗೂ ಅವರಿಂದ ನಮಗಾಗುವ ಉಪಯೋಗ ಬರೆ.**


















**ಚಿತ್ರದಲ್ಲಿಯ ಕೆಲಸಗಳ ಉಪಯೋಗ.**

1. ..................................  2. ..................................

3. ..................................  4. ..................................

5. ..................................  6. ..................................

7. ..................................  8. ..................................

**2. ಇದನ್ನು ಹೊರೆತುಪಡಿಸಿ ಇನ್ನೂ ಬೇರೆ ಯಾವ ಕೆಲಸಗಳಿಗಾಗಿ ನಮಗೆ ಸಹಾಯ ಬೇಕಾಗುತ್ತದೆ. ಅದರ ಪಟ್ಟಿ ತಯಾರಿಸು.**

..............................................................................................

..............................................................................................

..............................................................................................

..............................................................................................

**3. ಒಂದೇ ಶಬ್ದದಲ್ಲಿ ಉತ್ತರ ಬರೆ.**

1) ವಾಹನ ತೊಳೆಯುವ ಸ್ಥಳ ............................

2) ಸಾರಿಗೆ ಸಂಪರ್ಕ ಸುರಳಿತ ಮಾಡುವವ ............................

3) ಮನೆಮನೆಗೆ ಪತ್ರ, ಪಾರ್ಸಲ ಕೊಡುವವ ............................

4) ಸಾಮಾನು ಮಾರುವವ ............................

5) ಬಸ್ಸಿನಲ್ಲಿ ಟಿಕೇಟ ಕೊಡುವವ ............................

6) ಧಾನ್ಯ ಬೆಳೆಯುವವ ............................



**4. ದೊಡ್ಡವನಾದ ಮೇಲೆ ನಿನಗೆ ಯಾರಾಗಲು ಆಗಲು ಇಷ್ಟ ?**

..............................................................................................

..............................................................................................

..............................................................................................

..............................................................................................

## 5. ತಕ್ತೆ ಪೂರ್ಣಗೊಳಿಸು.

| ವ್ಯಕ್ತಿ | ಕೆಲಸ | ಉಪಯೋಗ |
|---|---|---|
| ಶಿಕ್ಷಕ | ಮಕ್ಕಳಿಗೆ ಅಭ್ಯಾಸದಲ್ಲಿ ಸಹಾಯ ಮಾಡುತ್ತಾರೆ | ಮಕ್ಕಳು ಜಾಣರಾಗುತ್ತಾರೆ |
| ಒಕ್ಕಲಿಗ | ______________ ______________ | ಅನ್ನಧಾನ್ಯ ದೊರೆಯುತ್ತದೆ |
| ______________ | ರೋಗಗಳ ಮೇಲೆ ಉಪಚಾರ ಮಾಡುತ್ತಾರೆ | ನಮ್ಮ ಕಾಯಿಲೆ ಗುಣವಾಗುತ್ತವೆ |
| ಟ್ರಾಫಿಕ ಪೋಲಿಸ | ರಸ್ತೆಗಳ ಮೇಲಿನ ಟ್ರಾಫಿಕ್ ನೋಡಿಕೊಳುತ್ತಾರೆ | ______________ ______________ |
| ಸ್ವಚ್ಚತೆ ಮಾಡುವವ | ರಸ್ತೆಯ ಸಫಾಯಿ ಮಾಡುತ್ತಾನೆ | ______________ ______________ |
| ಅಂಚೆಕಾರ | ______________ ______________ | ಜನರಿಗೆ ಸರಿಯಾದ ಸಮಯಕ್ಕೆ ಪತ್ರಗಳು ಹಾಗೂ ಪಾರ್ಸಲ ದೊರೆಯುತ್ತವೆ |
| ಅಂಗಡಿಕಾರ | ದೈನಂದಿನ ಉಪಯೋಗದಲ್ಲಿಯ ವಸ್ತು ಮಾರುತ್ತಾರೆ | ______________ ______________ |
| ತೋಟಗಾರಿಕೆ ಮಾಡುವವ | ______________ ______________ | ತೋಟ ಸುಂದರ ಇರುತ್ತದೆ. ಸುಶೋಭಿತವಾಗುತ್ತದೆ |
| ಇಲೆಕ್ಟ್ರೀಶಿಯನ್ | ವಿದ್ಯುತ ಉಪಕರಣಗಳನ್ನು ಸರಿಪಡಿಸುತ್ತಾರೆ | ______________ ______________ |
| ಪ್ಲಂಬರ (ನಲ್ಲಿ ಕೆಲಸದವ) | ನಳ ಸರಿಪಡಿಸುತ್ತಾರೆ (ಮಾಡುತ್ತಾರೆ) | ______________ ______________ |

ಅ. ಧ್ಯೆ. 1
ಕ್ಷ. 1.2
ಅ. ನಿ. 6

• ಬೇರೆ ಬೇರೆ ವ್ಯಕ್ತಿಗಳ ಕೆಲಸದ ಉಪಯೋಗ ತಿಳಿಸಿ ಹೇಳುವುದು.

## ◈ ನನ್ನ ಇಷ್ಟವಾದ ಕೆಲಸ

**6. ಕೆಳಗೆ ಕೊಟ್ಟ ಬೇರೆ ಬೇರೆ ವ್ಯವಸಾಯಕಾರರ ಕೆಲಸಗಳಲ್ಲಿ ನಿನಗೆ ಇಷ್ಟವಾಗುವ ಕೆಲಸದ ಕೆಳಗೆ ✓ ಹೀಗೆ ಗುರುತು ಮಾಡು.**













- ವಿದ್ಯಾರ್ಥಿಗಳ ಇಷ್ಟದ ಕೆಲಸದ ಬಗ್ಗೆ ಮಾಹಿತಿ ಕೇಳುವುದು.
- ವಿವಿಧ ವ್ಯವಸಾಯಕಾರರ ಭೂಮಿಕಾಭಿನಯ ಮಾಡಿಸಿಕೊಳ್ಳುವುದು. ಅವರು ಯಾವ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಗುರುತಿಸುವ ಆಟ ತೆಗೆದುಕೊಳ್ಳಬೇಕು.

# 9. ಹಸ್ತಕೌಶಲ್ಯ

ಇತರರ ಬಗೆಗಿನ ಭಾವನೆಯನ್ನು ವ್ಯಕ್ತಪಡಿಸುವ ಸಲುವಾಗಿ, ಶುಭಾಶಯ ನೀಡುವ ಸಲುವಾಗಿ ಉಡುಗೊರೆ ಕಾರ್ಡಿನ ಉಪಯೋಗವಾಗುತ್ತದೆ.

## ನನ್ನ ಕೃತಿ

### 1. ಶುಭಾಶಯ ಕಾರ್ಡ ತಯಾರಿಸುವುದು.

ಕೆಳಗೆ ಕೊಟ್ಟ ಸಾಹಿತ್ಯ ಹಾಗೂ ಸಾಧನಗಳ ಉಪಯೋಗ ಮಾಡಿ ಚಿತ್ರದಲ್ಲಿಯ ಕ್ರಮ ಅನುಸಾರ ಕೃತಿ ಮಾಡು.

**ಸಾಹಿತ್ಯ ಹಾಗೂ ಸಾಧನಗಳು**

ಗುಲಾಬಿ ಕಾರ್ಡಶಿಟ, ಬಿಳಿ ಕಾರ್ಡಶಿಟ, ಕತ್ತರಿ, ಗ್ಲೂ ಅಥವಾ ಅಂಟು, ಸ್ಕೇಚಪೆನ, ಗ್ಲಿಟರ ಪೇನ, ಇತ್ಯಾದಿ.






























**2. ಶಿಕ್ಷಕ ದಿನದ ಸಲುವಾಗಿ ಶಿಕ್ಷಕರಿಗೆ ಕೊಡುವ ಸಲುವಾಗಿ ಶುಭಾಶಯ ಕಾರ್ಡ ತಯಾರಿಸು.**

**3. ಬಣ್ಣದ ಕಾಗದದಿಂದ ಪಕ್ಷಿ ತಯಾರಿಸು.**




- ಶುಭಾಶಯ ಕಾರ್ಡ ತಯಾರಿಸುವ ಸಲುವಾಗಿ ಅವಶ್ಯಕ ಸಾಹಿತ್ಯ ಹಾಗೂ ಸಾಧನಗಳನ್ನು ತರಲು ಹೇಳುವುದು.
- ಸಾಹಿತ್ಯ ಹಾಗೂ ಸಾಧನಗಳ ಸುರಕ್ಷಿತವಾಗಿ ಉಪಯೋಗಿಸಲು ತಿಳಿಸುವುದು.

ಅ. ಧ್ಯೆ. 4
ಕ್ಷ. 4.1
ಅ. ನಿ. 22

### ◈ ಮಣ್ಣಿನಿಂದ ವಸ್ತು ತಯಾರಿಸುವುದು.

**4. ಕೊಟ್ಟ ಕ್ರಮಾಂಕದ ಅನುಸಾರ ಕೃತಿ ಮಾಡಿ ಮಣ್ಣಿನಿಂದ ಮೋಬಾಯಿಲ ತಯಾರಿಸು.**

**ಸಾಹಿತ್ಯ ಹಾಗೂ ಸಾಧನಗಳ**

1. ಮೃದುವಾದ ಮಣ್ಣು
2. ನೀರು
3. ಮಣ್ಣು ಕಲಿಸುವ ಸಲುವಾಗಿ ಬೇಕಾಗುವ ಪಾತ್ರೆ
4. ಅಲಂಕಾರದ ಸಲುವಾಗಿ ಬಣ್ಣ
5. ಕೈ ಒರೆಸುವ ಸಲುವಾಗಿ ಬಟ್ಟೆ
6. ಬ್ರಶ (ಕುಂಚ)



1. ಮಣ್ಣು ಹಸಿಗೊಳಿಸುವುದು



2. ಮಣ್ಣು ಕಲಿಸುವುದು



3. ಕೈಯಿಂದ ಆಕಾರ ಕೊಡುವುದು



4. ವಸ್ತು ಒಣಗಿಸುವುದು



5. ವಸ್ತುವಿಗೆ ಬಣ್ಣ ಕೊಡುವುದು

- ವಿದ್ಯಾರ್ಥಿಗಳಿಗೆ ಹಣ್ಣು, ವಸ್ತು, ಆಟಿಗೆ ಸಾಮಾನು ಇತ್ಯಾದಿ ತಯಾರಿಸಲು ತಿಳಿಸುವುದು.
- ವಿದ್ಯಾರ್ಥಿಗಳು ತಯಾರಿಸಿದ ವಸ್ತುಗಳ ಪ್ರದರ್ಶನ ಏರ್ಪಡಿಸಿರಿ.

ಅ. ಧ್ಯೆ. 1
ಕ್ಷ. 1.2
ಅ. ನಿ. 7

# 10. ನಮ್ಮ ವರ್ತನೆ: ಸಕಾರಾತ್ಮಕ ವರ್ತನೆ

ರಾಹುಲನು ಆಟಿಗೆ ಸಾಮಾನುಗಳನ್ನು ಆಡಿದ ನಂತರ ಅವುಗಳನ್ನು ವ್ಯವಸ್ಥಿತವಾಗಿ ಅದರ ಸ್ಥಳದಲ್ಲಿ ಇಟ್ಟನು. ಇದನ್ನು ನೋಡಿ ಅವನ ತಾಯಿಗೆ ಬಹಳ ಆನಂದವಾಯಿತು ಮತ್ತು ಅವಳು ಅವನಿಗೆ ಶಹಬಾಸ ಕೊಟ್ಟಳು. ಅನನ್ಯಾಳ ಕಾಲು ತಪ್ಪಿ ಅಜ್ಜನ ಕನ್ನಡಕಕ್ಕೆ ಹತ್ತಿತು. ಆದರೆ ಅವಳು ಬೇಗನೆ 'ಕ್ಷಮಿಸಿ' ಎಂದಳು ಮತ್ತು ಕನ್ನಡಕ ಸರಿಯಾಗಿ ಎತ್ತಿ ಇಟ್ಟಳು. ಇವು ಸಕಾರಾತ್ಮಕ ವರ್ತನೆಯ ಉದಾಹರಣೆಗಳು ಇವೆ.

## ನನ್ನ ಕೃತಿ

**ಸಕಾರಾತ್ಮಕ ವರ್ತನೆ ಎಂದರೇನೆ ಒಳ್ಳೆಯ ವರ್ತನೆ.**

**1. ಕೆಳಗಿನ ಚಿತ್ರಗಳ ನಿರೀಕ್ಷಣೆ ಮಾಡು. ಯೋಗ್ಯ ವರ್ತನೆ ಇರುವ ಚಿತ್ರದ ಕೆಳಗೆ ✓ ಹೀಗೆ ಗುರುತು ಮಾಡು.**



☐



☐



☐



☐



☐



☐

## 2. ನೀನು ಏನು ಮಾಡುವಿ?

1. ಅಜ್ಜ ವರ್ತಮಾನಪತ್ರ ಓದುವಸಲುವಾಗಿ ಕನ್ನಡಕ ಹುಡುಕುತ್ತಿದ್ದಾರೆ.

..........................................................................................

2. ತಾಯಿಯು ಮಾರುಕಟ್ಟೆಯಿಂದ ಸಾಮಾನುಗಳ ಕೈಚೀಲ ಹೊತ್ತುಕೊಂಡು ಬರುತ್ತಿದ್ದಾಳೆ.

..........................................................................................

3. ತಂದೆ ಆಫೀಸಿನಿಂದ ಮನೆಗೆ ಬಂದಿದ್ದಾರೆ.

..........................................................................................

4. ಮನೆಗೆ ನೆಂಟರು ಬಂದಿದ್ದಾರೆ.

..........................................................................................

5. ಮನೆಯ ಒಂದು ಕೋಣೆಯಲ್ಲಿ ಯಾರು ಇಲ್ಲ, ಆದರು ಅಲ್ಲಿ ಲಾಯಿಟ ಹಾಗೂ ಫ್ಯಾನ ಚಾಲೂ ಇವೆ.

..........................................................................................

6. ರಸ್ತೆಯಲ್ಲಿ ಬಾಳೆಹಣ್ಣಿನ ಸಿಪ್ಪೆ ಬಿದ್ದಿದೆ.

..........................................................................................

7. ಮನೆಯಲ್ಲಿ (ವೃತ್ತಪತ್ರಿಕೆ) ವರ್ತಮಾನ ಪತ್ರಿಕೆಗಳು ಮಾಸಿಕೆಗಳು, ಪುಸ್ತಕಗಳು ಬಿದ್ದಿವೆ.

